ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYA PRAGATHI Kannada daily
SP NEWS ಡಿಜಿಟಲ್ ನ್ಯೂಸ್ ಕಹಾನಿ
ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume:05 Issue:126
ಸಂಪುಟ: 05 ಸಂಚಿಕೆ: 126
Date:03-06-2026 Wednesday
RNI NO : KARKAN/2021/80805
L2/RNP-1285/TMR/2025-27
Page :4 ಪುಟ : 4
Price: 1.00 ಬೆಲೆ: 1.00 ರೂ

# ಕರ್ನಾಟಕ ಲೋಕಭವನದಲ್ಲಿ ಡಿ.ಕೆ. ಶಿವಕುಮಾರ್ ಪಟ್ಟಾಭಿಷೇಕ; ವಿಧಾನಸೌಧ, ವಿಕಾಸಸೌಧ ಸಿಬ್ಬಂದಿಗೆ ಅರ್ಧ ರಜೆ; 90 ಸಾವಿರ ಮನೆಗಳಿಗೆ 'ಲಾಡು' ಭಾಗ್ಯ

ಸೂರ್ಯಪ್ರಗತಿನ್ಯೂಸ್.ಕಾಂ



ಡಿ.ಕೆ.ಶಿವಕುಮಾರ್ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದು, ಲೋಕಭವನಕ್ಕೆ ಸಾರ್ವಜನಿಕ ಪ್ರವೇಶ ನಿಷೇಧಿಸಲಾಗಿದೆ. ಕಾರ್ಯಕ್ರಮದ ಭದ್ರತೆ ಸಂಬಂಧ ನಗರ ಪೊಲೀಸ್ ಆಯುಕ್ತರು ಅಧಿಕಾರಿಗಳ ಸಭೆ ನಡೆಸಿ ಅದಾಗಲೇ ಸಲಹೆ ಮತ್ತು ಸೂಚನೆಗಳನ್ನು ನೀಡಿದ್ದಾರೆ. ಮತ್ತೊಂದೆಡೆ ಕರ್ನಾಟಕ ಲೋಕಭವನ ಮತ್ತು ಸುತ್ತ ಮುತ್ತ ಪ್ರದೇಶದಲ್ಲಿ ಜನಸಂದಣಿ ಉಂಟಾಗುವ ಸಾಧ್ಯತೆ ಇರುವುದರಿಂದ ವಿಧಾನಸೌಧ, ವಿಕಾಸಸೌಧ ಸಿಬ್ಬಂದಿಗೆ ಇಂದು ಮಧ್ಯಾಹ್ನ ಅರ್ಧದಿನ ರಜೆ ಘೋಷಿಸಲಾಗಿದೆ. ವಿವಿಧ ರೀತಿಯಲ್ಲಿ ಕಾರ್ಯಕ್ರಮಕ್ಕೆ ಪಾಸ್ ಹಂಚಿಕೆ ಮಾಡಲಾಗಿದ್ದು, ಆ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದೇವೆ. ಸಂಚಾರ ಮಾರ್ಗದಲ್ಲಿ ಕೆಲವೊಂದು ಬದಲಾವಣೆ ಮಾಡಿದ್ದು, ರೋಡ್ ಶೋ ನಡೆಸುವುದರ ಭಗ್ಗೆ ಯಾವುದೇ ಮಾಹಿತಿ ಇಲ್ಲ. ಹೊರ ರಾಜ್ಯದಿಂದಲೂ ವಿಐಪಿಗಳು ಕಾರ್ಯಕ್ರಮಕ್ಕೆ ಬರುತ್ತಿರುವ ಹಿನ್ನೆಲೆ ಗಣ್ಯರ ಭದ್ರತೆಗೂ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ ಎಂದು ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.




**ಡಿಕೆ ಶಿವಕುಮಾರ್ ಪ್ರಮಾಣ ವಚನ ಹಿನ್ನೆಲೆ 90 ಸಾವಿರ ಮನೆಗಳಿಗೆ 'ಲಾಡು' ಭಾಗ್ಯ;**



ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಲಿರುವ ಸಂಭ್ರಮದಲ್ಲಿ, ನೆಲಮಂಗಲ ವಿಧಾನಸಭಾ ಕ್ಷೇತ್ರವೇ ಹಬ್ಬದಂತೆ ಸಜ್ಜಾಗಿದೆ. ಕ್ಷೇತ್ರದ ಶಾಸಕ ಶ್ರೀನಿವಾಸ್ ಅವರ ನೇತೃತ್ವದಲ್ಲಿ 85 ಸಾವಿರಕ್ಕೂ ಹೆಚ್ಚು ಮನೆಗಳಿಗೆ ತಲಾ 750 ಗ್ರಾಂ ಉಚಿತ ಲಾಡು ವಿತರಿಸಲಾಗುತ್ತಿದೆ. ಈ ಐತಿಹಾಸಿಕ ಕ್ಷಣವನ್ನು ಸ್ಮರಣೀಯವಾಗಿಸಲು 300 ಬಾಣಸಿಗರು ಹಗಲಿರುಳು ಶ್ರಮಿಸಿ 10 ಲಕ್ಷ ಲಾಡು ತಯಾರಿಸುತ್ತಿದ್ದಾರೆ, ಇದು ಡಿ.ಕೆ. ಶಿವಕುಮಾರ್ ಅವರ ಸಿಎಂ ಪಟ್ಟಕ್ಕೆ ನೆಲಮಂಗಲದ ಜನರ ಸಂತಸದ ಪ್ರತೀಕವಾಗಿದೆ.ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಲಿರುವ ಐತಿಹಾಸಿಕ ಕ್ಷಣಕ್ಕೆ ಇಡೀ ನೆಲಮಂಗಲ ವಿಧಾನಸಭಾ ಕ್ಷೇತ್ರವೇ ವಧುವಿನಂತೆ ಸಿಂಗಾರಗೊಳ್ಳುತ್ತಿದ್ದು, ಹಬ್ಬದ ವಾತಾವರಣ ನಿರ್ಮಾಣವಾಗಿದೆ. ತಾಲೂಕಿನಾದ್ಯಂತ ಇರುವ ಸುಮಾರು 85 ಸಾವಿರದಿಂದ 90 ಸಾವಿರ ಮನೆಗಳಿಗೆ ತಲಾ ಮುಕ್ಕಾಲು ಕೆಜಿಯಷ್ಟು (750 ಗ್ರಾಂ) ಉನ್ನತ ಗುಣಮಟ್ಟದ ಲಾಡುಗಳ ಸಿಹಿ ಬಾಕ್ಸ್ ಅನ್ನು ಉಚಿತವಾಗಿ ವಿತರಿಸಲು ಶಾಸಕರು ನಿರ್ಧರಿಸಿದ್ದಾರೆ. ಬೆಳಗ್ಗೆಯಿಂದಲೇ ಈ ಬೃಹತ್ ಸಿಹಿ ಹಂಚಿಕೆ ಅಭಿಯಾನಕ್ಕೆ ಅಧಿಕೃತವಾಗಿ ಚಾಲನೆ ಸಿಗಲಿದೆ.

**300 ಬಾಣಸಿಗರಿಂದ ಹಗಲಿರುಳು ಸಿದ್ಧತೆ; 10 ಲಕ್ಷ ಲಾಡು ತಯಾರಿ!**:ಈ ಸಿಹಿ ವಿತರಣಾ ಕಾರ್ಯಕ್ಕಾಗಿ ನೆಲಮಂಗಲದಲ್ಲಿ ಬೃಹತ್ ಅಡುಗೆ ಶಾಲೆ ನಿರ್ಮಾಣವಾಗಿದ್ದು, ಸುಮಾರು 250 ರಿಂದ 300 ನುರಿತ ಬಾಣಸಿಗರು ಹಗಲಿರುಳು ಎನ್ನದೆ ಶ್ರಮಿಸುತ್ತಿದ್ದಾರೆ. ಇಡೀ ಕ್ಷೇತ್ರಕ್ಕೆ ವಿತರಿಸಲು ಒಟ್ಟಾರೆ 9 ರಿಂದ 10 ಲಕ್ಷ ಲಾಡುಗಳ ಅಗತ್ಯವಿದ್ದು, ಸದ್ಯ ಭರದಲ್ಲಿ ಲಾಡು ತಯಾರಿಕೆ ನಡೆಯುತ್ತಿದೆ.

**ಅಪೂರ್ವ ಸಂಗಮಕ್ಕೆ ಹಾಜರಾಗುವ ಗಣ್ಯರು**

ಈ ಸಮಾರಂಭಕ್ಕೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಸೇರಿದಂತೆ ಕಾಂಗ್ರೆಸ್ ಹೈಕಮಾಂಡ್‌ನ ಪ್ರಮುಖ ನಾಯಕರು ಸಾಕ್ಷಿಯಾಗಲಿದ್ದಾರೆ. ಇವರೊಂದಿಗೆ ದೇಶದ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ವಿವಿಧ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳು ಮತ್ತು ಪ್ರಮುಖ ಸಂಸದರು ಪಾಲ್ಗೊಳ್ಳಲಿದ್ದಾರೆ. ಸಮಾರಂಭಕ್ಕೆ ಮಂಗಳಕರ ಚಾಲನೆ ನೀಡಲು ಸರ್ವಧರ್ಮ ಗುರುಗಳನ್ನು ಆಹ್ವಾನಿಸಲಾಗಿದೆ.

ಕೇವಲ ರಾಜಕೀಯಕ್ಕಷ್ಟೇ ಸೀಮಿತವಾಗದೆ ಮಾಧ್ಯಮ ಕ್ಷೇತ್ರ, ಚಿತ್ರರಂಗ, ನ್ಯಾಯಾಂಗ, ಕ್ರೀಡಾಕ್ಷೇತ್ರ, ನಾಟಕ ರಂಗದ ದಿಗ್ಗಜರು, ಪ್ರಮುಖ ಸಾಹಿತಿಗಳು ಹಾಗೂ ಕಲಾವಿದರು ಈ ಸಮಾರಂಭಕ್ಕೆ ಬರಲಿದ್ದಾರೆ. ಆರ್ಥಿಕ ವಲಯದಿಂದ ಪ್ರಮುಖ ಕೈಗಾರಿಕೋದ್ಯಮಿಗಳು, ವಾಣಿಜ್ಯೋದ್ಯಮಿಗಳು, ಹೋಟೆಲ್ ಉದ್ಯಮಿಗಳು ಹಾಗೂ ದೇಶದ ಭವಿಷ್ಯವಾಗಿರುವ ಯುವ ಮುಖಂಡರಿಗೆ ಸಾಕ್ಷಿಯಾಗಲು ವೇದಿಕೆ ಸಜ್ಜಾಗಿದೆ. ಒಟ್ಟಾರೆಯಾಗಿ ರಾಜಕೀಯ ಗಣ್ಯರು ಮತ್ತು ಜನಸಾಮಾನ್ಯರ ಅಪೂರ್ವ ಸಂಗಮಕ್ಕೆ ಈ ಪ್ರಮಾಣ ವಚನ ಕಾರ್ಯಕ್ರಮ ಸಾಕ್ಷಿಯಾಗಲಿದೆ.

# ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ–2026; ಜೂನ್ 30ರಿಂದ ಜುಲೈ 29ರವರೆಗೆ ಮನೆ ಮನೆ ಭೇಟಿ

## ಅಕ್ಟೋಬರ್ 7 ಅಂತಿಮ ಪಟ್ಟಿ ಪ್ರಕಟನಮೂನೆ ಸಲ್ಲಿಸಿದರೆ ಮಾತ್ರ ಮತದಾರರ ಪಟ್ಟಿಯಲ್ಲಿ ಹೆಸರು : ಜಿಲ್ಲಾಧಿಕಾರಿ ಶುಭ ಕಲ್ಯಾಣ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜೂನ್ 30ರಿಂದ ಆರಂಭವಾಗಲಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ–2026 ಸಂದರ್ಭದಲ್ಲಿ ಮತಗಟ್ಟೆ ಅಧಿಕಾರಿಗಳು ನೀಡುವ ಗಣತಿ ನಮೂನೆ ಭರ್ತಿ ಮಾಡಿ ಸಲ್ಲಿಸಿದಲ್ಲಿ ಮಾತ್ರ ಪರಿಷ್ಕೃತ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರಲಿದೆ. ಮತದಾರರು ತಪ್ಪದೆ ನಮೂನೆ ಭರ್ತಿ ಮಾಡಿ ತಮ್ಮ ಮತಗಟ್ಟೆ ಅಧಿಕಾರಿಗಳಿಗೆ ಅವಧಿಯೊಳಗೆ ಸಲ್ಲಿಸುವಂತೆ ತಿಳಿಸಿದ್ದಾರೆ.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ–2026 (ಎಸ್‌ಐಆರ್) ಸಂಬಂಧ ನಗರದ ಕೇಂದ್ರ ಗ್ರಂಥಾಲಯದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, ಜೂನ್ 20ರಿಂದ 29ರವರೆಗೆ ತರಬೇತಿ, ನಮೂನೆಗಳ ಮುದ್ರಣ ಇತ್ಯಾದಿ ತಯಾರಿಗಳನ್ನು ಮಾಡಿಕೊಂಡು ಜೂನ್ 30ರಿಂದ ಜುಲೈ 29ರವರೆಗೆ ಮತಗಟ್ಟೆ ಅಧಿಕಾರಿಗಳು ಮನೆ ಮನೆಗೆ ತೆರಳಿ ಮತದಾರರ ಪಟ್ಟಿಯ ಮಾಹಿತಿಯ ಗಣತಿ ನಮೂನೆಯನ್ನು ನೀಡಲಿದ್ದಾರೆ. 2025ರ ಮತದಾರರ ಪಟ್ಟಿಯಲ್ಲಿರುವಂತೆ ಸಂಬಂಧಿಸಿದ ಮಾಹಿತಿ ಈಗಾಗಲೇ ಮುದ್ರಣವಾಗಿರುತ್ತದೆ. ಉಳಿದ ಮಾಹಿತಿಯನ್ನು ನಿಗದಿತ ಅವಧಿಯಲ್ಲಿ ಆ ಮನೆಯ ಮತದಾರರು ತುಂಬಿ ನಿರ್ದಿಷ್ಟ ದಾಖಲೆಯೊಂದಿಗೆ ಮರಳಿ ಮತಗಟ್ಟೆ ಅಧಿಕಾರಿಗೆ ನೀಡಬೇಕು. ಒಂದೊಮ್ಮೆ ಅದನ್ನು ಸಲ್ಲಿಸದಿದ್ದಲ್ಲಿ ಅವರ ಹೆಸರು ಅಂತಿಮ ಮತದಾರರ ಪಟ್ಟಿಯಿಂದ ಹೊರಗುಳಿಯಲಿದೆ ಎಂದು ಅವರು ತಿಳಿಸಿದರು.ಮತದಾರರ ಪಟ್ಟಿ ಪರಿಷ್ಕರಣೆ ಒಂದು ನಿರಂತರ ಪ್ರಕ್ರಿಯೆ, ಅಲ್ಲಿ ಕೇವಲ ಮತದಾರರ ಹೆಸರು ಸೇರ್ಪಡೆ, ತೆಗೆಯುವುದು




ಹಾಗೂ ವಿಳಾಸ ಬದಲಾವಣೆ ನಡೆಯುತ್ತದೆ. ಯಾವೊಬ್ಬ ಮತದಾರರೂ ಮತದಾನದಿಂದ ಹೊರಗುಳಿಯಬಾರದು ಹಾಗೂ ಪ್ರತಿಯೊಬ್ಬರಿಗೂ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆಯಲ್ಲಿ ಭಾಗವಹಿಸುವ ಅವಕಾಶ ದೊರಕಿಸುವಂತೆ ಮಾಡುವ ಉದ್ದೇಶದಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಈ ಪ್ರಕ್ರಿಯೆ ದೇಶದಲ್ಲಿ ಇದೇ ಮೊದಲಲ್ಲ ಹಾಗೂ ಕರ್ನಾಟಕದಲ್ಲಿ ಕೂಡ 2002ರಲ್ಲಿ ಸಮಗ್ರ ಪರಿಷ್ಕರಣೆ ಆಗಿದ್ದು ಈಗ 2026ರಲ್ಲಿ ಮಾಡಲಾಗುತ್ತಿದೆ. ಇದು ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳು ರಾಜ್ಯದ ಎಲ್ಲ ಜಿಲ್ಲಾ ಚುನಾವಣಾಧಿಕಾರಿಗಳಿಗೆ ತರಬೇತಿ ನೀಡಿದ್ದು, ಅದರಂತೆ ತುಮಕೂರು ಜಿಲ್ಲೆಯಲ್ಲಿ ಕೂಡ ಈ ಪ್ರಕ್ರಿಯೆ ನಡೆಯಲಿದೆ ಎಂದು ಅವರು ವಿವರಿಸಿದರು.

ಅದರಂತೆ ಅಕ್ಟೋಬರ್ 1ರಂದು ಅರ್ಹತಾ ದಿನಾಂಕ ಪ್ರಕಟಿಸಲಿದ್ದು, ಜೂನ್ 30ರಿಂದ ಜುಲೈ 29ರವರೆಗೆ ಮತಗಟ್ಟೆ ಅಧಿಕಾರಿಗಳು ಮನೆ ಮನೆ ಭೇಟಿ, ಜುಲೈ 29ರಂದು ಮತಗಟ್ಟೆಗಳ ಕ್ರಮಬದ್ಧಗೊಳಿಸುವಿಕೆ, ಆಗಸ್ಟ್ 5 ಮತದಾರರ ಪಟ್ಟಿ ಕರಡು ಪ್ರಕಟ, ಆಗಸ್ಟ್ 5ರಿಂದ ಸೆಪ್ಟೆಂಬರ್ 4ರವರೆಗೆ ಆಕ್ಷೇಪಣೆಗಳಿಗೆ ಅವಕಾಶ ಹಾಗೂ ಆಗಸ್ಟ್ 5ರಿಂದ ಅಕ್ಟೋಬರ್ 3ರವರೆಗೆ ಆಕ್ಷೇಪಣೆಗಳನ್ನು ಸರಿಪಡಿಸಿಕೊಳ್ಳಲು ಅವಕಾಶ ಹಾಗೂ ಅಂತಿಮವಾಗಿ ಅಕ್ಟೋಬರ್ 7ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಅವರು ತಿಳಿಸಿದರು.ತುಮಕೂರು ಜಿಲ್ಲೆಯಲ್ಲಿ ಒಟ್ಟು 2356 ಮತಗಟ್ಟೆಗಳನ್ನು ಗುರುತಿಸಲಾಗಿದ್ದು, ಎಲ್ಲೆಡೆ ಮತಗಟ್ಟೆ ಅಧಿಕಾರಿಗಳು ಇರಲಿದ್ದಾರೆ. 2025ರ ಮತದಾರರ ಪಟ್ಟಿಯಂತೆ ಜಿಲ್ಲೆಯ ಒಟ್ಟು 11 ವಿಧಾನಸಭಾ ಕ್ಷೇತ್ರಗಳಲ್ಲಿ ಪುರುಷ ಹಾಗೂ ಮಹಿಳೆಯರು ಸೇರಿ ಒಟ್ಟು 22,98,096 ಮತದಾರರಿದ್ದು, ಈ ಎಲ್ಲ ಮತದಾರರ ಗಣತಿಯೂ ಸಮಗ್ರ ಪರಿಷ್ಕರಣೆಯಲ್ಲಿ ಆಗಲಿದೆ. ಈ ಅವಧಿಯಲ್ಲಿ ಮತದಾರರ ಪಟ್ಟಿಯಲ್ಲಿದ್ದು, ಮೃತಪಟ್ಟವರ ಹೆಸರು ಕೈಬಿಡುವ, 18 ತುಂಬಿರುವ ಹೊಸ ಮತದಾರರನ್ನು ಸೇರ್ಪಡೆಗೊಳಿಸುವ ಹಾಗೂ ಸ್ಥಳಾಂತರಗೊಂಡ ಮತದಾರರು ಸೇರಿದಂತೆ ಸಂಪೂರ್ಣ ಪಟ್ಟಿಯ ಸಮಗ್ರ ಪರಿಷ್ಕರಣೆ ಈ ಹಂತದಲ್ಲಿ ಆಗಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು

ಗಣತಿ ನಮೂನೆ ಸಲ್ಲಿಕೆಯ ನಂತರ ಕರಡು ಪಟ್ಟಿಯಲ್ಲಿ ಎಲ್ಲ ಮತಗಟ್ಟೆ, ಗ್ರಾಮ ಪಂಚಾಯ್ತಿ ವಾರ್ಡುಗಳು, ನಗರ ಸ್ಥಳೀಯ ಸಂಸ್ಥೆಗಳ ವಾರ್ಡುಗಳಲ್ಲಿ ಹಾಗೂ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಈ ಹಂತದಲ್ಲಿ ಮಾಹಿತಿ ತಪ್ಪಾಗಿದ್ದರೆ, ಬಿಟ್ಟು ಹೋಗಿದ್ದರೆ ಆಕ್ಷೇಪಣಾ ಅವಧಿಯಲ್ಲಿ ತಮ್ಮ ಆಕ್ಷೇಪಣೆಯನ್ನು ಮತದಾರರು ಸಲ್ಲಿಸಬಹುದು. ಇದಕ್ಕಾಗಿ ಎರಡು ತಿಂಗಳ ಕಾಲಾವಧಿ ಇರುವುದರಿಂದ ಯಾವ ಮತದಾರರೂ ಪಟ್ಟಿಯಿಂದ ಬಿಟ್ಟು ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಅವರು ತಿಳಿಸಿದರು.

ಹೊಸ ಮತದಾರರ ನೋಂದಣಿ ಅಥವಾ ವರ್ಗಾವಣೆ ಸಂದರ್ಭದಲ್ಲಿ ನಮೂನೆ 6/8 ತುಂಬುವುದಾದಲ್ಲಿ ನಿರ್ದಿಷ್ಟಪಡಿಸಿರುವ 12 ದಾಖಲೆಗಳಲ್ಲಿ ಒಂದನ್ನು ಘೋಷಣಾ ನಮೂನೆಯೊಂದಿಗೆ ಸ್ವಯಂ ದೃಢೀಕರಿಸಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ ಎಂದರು. ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಮತದಾರರ ಭಾಗವಹಿಸುವಿಕೆ ಚಟುವಟಿಕೆಯ ಮುಖ್ಯಸ್ಥರೂ ಆದ ಬಿ.ವಿ.ಅಶ್ವಿಜ ಅವರು ಮಾತನಾಡಿ, ಮತದಾರರ ಜಾಗೃತಿ ಸಂಬಂಧಿಸಿದಂತೆ ಜಿಲ್ಲಾದ್ಯಂತ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿವೆ. ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಹಾಗೂ ಶಾಲಾ ಹಂತದಲ್ಲಿ ಮತದಾರರ ಜಾಗೃತಿ ಕ್ಲಬ್‌ಗಳನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.ಅಪರ ಜಿಲ್ಲಾಧಿಕಾರಿ ಡಾ.ಎನ್.ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.



# " ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು

ಇತ್ತೀಚೆಗೆ ಸಿನಿಮಾ ನಟಿಯರು ಪಾಪರಾಜಿಗಳು ಎಂದು ಕರೆಯಲ್ಪಡುವ ಕೆಲವು ಛಾಯಾಚಿತ್ರಗಾರರು ಮತ್ತು ಸಾಮಾಜಿಕ ಜಾಲತಾಣಗಳ ವಿಕೃತ ಮನಸ್ಸಿನ ಅತಿರೇಕಿಗಳ ಹುಚ್ಚಾಟಗಳಿಗೆ ಬಲಿಯಾಗಿ, ಅವರ ವಿರುದ್ಧ ಮಾತನಾಡುತ್ತಿದ್ದಾರೆ. ಅಂದರೆ ಕೆಲವು ಸಾರ್ವಜನಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ನಟಿಯರ ಕೆಲವು ದೃಶ್ಯಗಳನ್ನು ಸೆರೆಹಿಡಿದು, ಬೇಕಂತಲೇ ಅವರ ದೇಹದ ಉಬ್ಬು ತಗ್ಗುಗಳ ಮೇಲೆ ಕ್ಯಾಮೆರಾ ಕೇಂದ್ರೀಕರಿಸಿ ಅಥವಾ ಜೂಮ್ ಮಾಡಿ ಅವರನ್ನು ಕೆಟ್ಟದಾಗಿ ತೋರಿಸುವ ಒಂದು ರೀತಿಯ ದೃಶ್ಯಾತ್ಮಕ ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಲಾಗುತ್ತಿದೆ. ಅದಕ್ಕೆ ಕೆಲವು ಸಿನಿಮಾ ನಟರು ಸಹ ಬೆಂಬಲಿಸಿದ್ದಾರೆ.

ಯಾವುದೇ ರೀತಿಯ ಅಶ್ಲೀಲ, ದೌರ್ಜನ್ಯ, ಶೋಷಣೆ, ಹಿಂಸೆಯನ್ನು ಎಲ್ಲರೂ ಖಂಡಿಸಲೇಬೇಕು. ಅದಕ್ಕೆ ಪ್ರಬುದ್ಧ ಮನಸ್ಸುಗಳಾದ ಎಲ್ಲರದೂ ಬೆಂಬಲವಿದೆ. ಜೊತೆಗೆ,

ಈ ಕೃತಕ ಬುದ್ಧಿಮತ್ತೆಯ ಅತ್ಯಂತ ಆಧುನಿಕ ಕಾಲಘಟ್ಟದಲ್ಲಿ ಈ ವಿಷಯವನ್ನು ಸೂಕ್ಷ್ಮವಾಗಿ, ವಿಶಾಲವಾಗಿ, ಮುಕ್ತವಾಗಿ, ಯಾವುದೇ ಭಾವನಾತ್ಮಕ ಅಂಶಗಳಿಗೆ ಒಳಗಾಗದೆ ನಿಂತು ನೋಡಿದಾಗ......

ಕೇವಲ ಪಾಪರಾಜಿಗಳು ಮಾತ್ರವಲ್ಲ, ಕೆಲವೊಬ್ಬ ಸಾಮಾನ್ಯ ವ್ಯಕ್ತಿಗಳು ಸಹ ಮಹಿಳೆಯರ ದೃಶ್ಯಗಳನ್ನು ಜೂಮ್ ಮಾಡಿ ತಮಗೆ ಆಸಕ್ತಿ ಇರುವ ಭಾಗಗಳನ್ನು ತೀರ ಹತ್ತಿರದಿಂದ ನೋಡುವ ತಂತ್ರಜ್ಞಾನ ಉಪಯೋಗಿಸಿಕೊಂಡು ಅದನ್ನು ದುರುಪಯೋಗ ಪಡಿಸಿಕೊಳ್ಳುವ ವಾತಾವರಣ ಬೆಳೆದಿದೆ. ಇನ್ನೂ ಕೆಲವರು ಮತ್ತಷ್ಟು ಮುಂದುವರಿದು ಆಧುನಿಕ ತಂತ್ರಜ್ಞಾನದ ಬಳಕೆ ತಿಳಿದಿದ್ದರೆ ಆ ಮಹಿಳೆಯರ ಮೈ ಮೇಲಿನ ಹೊದಿಕೆಯನ್ನು ಸಹ ತೆಗೆದಂತೆ ಮಾಡಿ ನಗ್ನ ದೃಶ್ಯಗಳನ್ನು ವೀಕ್ಷಿಸುವ ಸಾಧ್ಯತೆಯೂ ಇದೆ ಮತ್ತು ಅದನ್ನೇ ಚಟವಾಗಿ ಬೆಳೆಸಿಕೊಂಡಿದ್ದಾರೆ ಎಂದು ಕೇಳಲ್ಪಟ್ಟಿದ್ದೇನೆ.

ಮೂಲತಃ ಪ್ರಕೃತಿಯೇ ಬೆತ್ತಲು ಮತ್ತು ಅದೇ ಸಹಜ ಸೌಂದರ್ಯ. ಎಲ್ಲಾ ಜೀವಿಗಳು ಸಹ ಬೆತ್ತಲೆ ಮತ್ತು ಹುಟ್ಟಿನಿಂದ ಮನುಷ್ಯ ಪ್ರಾಣಿ ಸಹ. ಆದರೆ ಎಲ್ಲೋ ನಾಗರಿಕತೆ ಎಂಬ ಭ್ರಮೆ ಬೆಳೆದಂತೆ ಅಥವಾ ಸ್ವಚ್ಚತೆಯ ಕಾರಣಕ್ಕಾಗಿ ಅಥವಾ ರಕ್ಷಣೆಯ ವಿಧಾನವಾಗಿ ಅತ್ಯಂತ ತೆಳುವಾದ ತುಂಡು ಬಟ್ಟೆಗಳು ಮೈ ಮುಚ್ಚತೊಡಗಿರಬೇಕು. ಕೊನೆಗೆ ಅದು ಗಾಳಿ, ನೀರು, ಆಹಾರದ ನಂತರದ ಬದುಕಿನ ಅತ್ಯಂತ ಅನಿವಾರ್ಯ ಅವಶ್ಯಕತೆಯಾಗಿ ಬೆಳವಣಿಗೆ ಹೊಂದಿದೆ. ಈಗ ಟೆಕ್ಸ್ಟೈಲ್ ಟೆಕ್ನಾಲಜಿ ಮತ್ತು ಫ್ಯಾಷನ್ ಡಿಸೈನಿಂಗ್ ಒಂದು ಬೃಹತ್ ಉದ್ಯಮವಾಗಿ ಬೆಳವಣಿಗೆ ಹೊಂದಿದೆ.....

ಸಾಮಾನ್ಯ ಅರಿವಿನ ಎಲ್ಲರಿಗೂ ತಿಳಿದಿದೆ, ಬಟ್ಟೆಗಳ ಹಿಂದಿನ ಅಂಗಾಗಗಳ ಬಗ್ಗೆ. ಅದನ್ನು ಯಾರೋ ಹುಚ್ಚರು ಅಥವಾ ವಿಕೃತರು ಅಥವಾ ಕ್ರಿಮಿನಲ್ ಗಳು ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರೆ ನಾವು ಮಾಡುವುದಾದರೂ ಏನು.



ನಮ್ಮ ಹೆಣ್ಣು ಮಕ್ಕಳು ನಮ್ಮದೇ ದೇಹದ ಮುಂದುವರಿದ ಇನ್ನೊಂದು ಭಾಗ ಮಾತ್ರ. ಬದುಕಲು ಗಾಳಿ, ನೀರು, ಆಹಾರ ಸೇವಿಸಲು ಇರುವ ರಂಧ್ರಗಳಂತೆ ಸಂತತಿಯ ಮುಂದುವರಿಕೆಗೆ ಕೆಲವು ಅಂಗಗಳಿವೆ ಅಷ್ಟೇ. ಹುಚ್ಚ ಅಥವಾ ಹುಚ್ಚಿ ಅದನ್ನು ಚಿತ್ರೀಕರಿಸಿದರೆ ಅದು ಹುಚ್ಚರ ಸಮಸ್ಯೆ. ನಾವ್ಯಾಕೇ ತಲೆಕೆಡಿಸಿಕೊಳ್ಳಬೇಕು.....

ಆದ್ದರಿಂದ ಈ ವಿಕೃತ ಹುಚ್ಚರ ಸಂತೆಯಲ್ಲಿ ಅದನ್ನು ತಡೆಯುವುದು ಸಾಧ್ಯವೇ ಇಲ್ಲ. ಆದರೆ ಸಾರ್ವಜನಿಕವಾಗಿ ಅದನ್ನು ಪ್ರದರ್ಶಿಸುವವರ ವಿರುದ್ಧ ನಿಷೇಧ ಹೇರುವ ಅಥವಾ ಕಾನೂನು ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಮಾತ್ರ ಇದೆ.

ನಮ್ಮ ಸುತ್ತಮುತ್ತಲು ನಡೆದರೆ ಅಥವಾ ಪರಿಚಿತರ ನಡುವೆ ನಡೆದರೆ ಹೇಗೋ ತಡೆಯಬಹುದು. ಆದರೆ ವಿಶ್ವದ ಯಾವುದೋ ಮೂಲೆಯಲ್ಲಿ, ಯಾರೋ ವ್ಯಕ್ತಿ, ಯಾರಿಗೂ ಕಂಡುಹಿಡಿಯಲು ಸಾಧ್ಯವಿಲ್ಲದಂತೆ ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡಿದರೆ ಅದನ್ನು ತಡೆಯುವುದು ತುಂಬಾ ಕಷ್ಟ. ಜೊತೆಗೆ ಎಷ್ಟು ಜನರ ಮೇಲೆ ಅಂತ ಈ ರೀತಿಯ ಕ್ರಮ ಕೈಗೊಳ್ಳುವುದು.....

ಇದನ್ನು ಮೀರಿ ನಾವು ಮತ್ತೊಂದು ಮಾನಸಿಕ ಹಂತವನ್ನು ತಲುಪಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಅಂದರೆ ಶೀಲಾ ಅಶ್ಲೀಲಗಳು ದೇಹದ ಯಾವುದೇ ಭಾಗದಲ್ಲಿ ಅಡಗಿಲ್ಲ, ಮಾನಸಿಕವಾಗಿಯೂ ಶೀಲಾ ಅಶ್ಲೀಲಗಳ ಅಸ್ತಿತ್ವವೇ ಇಲ್ಲ, ಮನುಷ್ಯ ಎಂಬ ಪ್ರಾಣಿ, ಗಂಡು ಹೆಣ್ಣಿನ ರೂಪದಲ್ಲಿ, ಮೈಮೇಲೆ ಅತ್ಯಂತ ತೆಳುವಾದ ಬಟ್ಟೆಗಳನ್ನು ಹಾಕಿಕೊಂಡು ಈ ಜನಾಂಗವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾನೆ/ಳೆ.

ಹೆಣ್ಣಾಗಲಿ ಗಂಡಾಗಲಿ, ಅವರ ಯಾವುದೇ ಗುಪ್ತಾಂಗಗಳಾಗಲಿ, ಶೀಲವೂ ಅಲ್ಲ, ಅಶ್ಲೀಲವು ಅಲ್ಲ. ಕಣ್ಣು, ಕಿವಿ, ಕೈ, ಕಾಲು, ಶಿಶ್ನ, ಯೋನಿ, ತಲೆಯಂತೆ ಎಲ್ಲವೂ ಪ್ರಕೃತಿಯ ಸಹಜ ಕೊಡುಗೆ. ಗುಪ್ತಾಂಗವೂ ಇಲ್ಲ, ಮುಕ್ತಾಂಗವೂ ಇಲ್ಲ, ಬಾಯಿಯೂ ಒಂದೇ, ಗುದದ್ವಾರವೂ ಒಂದೇ. ಅದರ ಕೆಲಸ ಅದು ನಿರ್ವಹಿಸುತ್ತದೆ. ಅದಿಲ್ಲದೆ ಮನುಷ್ಯನಿಗೆ ಅಸ್ತಿತ್ವವೇ ಇಲ್ಲ. ಅದನ್ನು ವಿಶೇಷವಾಗಿ ಗುರುತಿಸುವ ಅವಶ್ಯಕತೆಯೂ ಇಲ್ಲ. ಊಟ, ನಿದ್ದೆ, ವಿಸರ್ಜನೆ, ಪ್ರಣಯ, ಮಿಲನ ಎಲ್ಲವೂ ಅತ್ಯಂತ ಸಹಜವಾದದ್ದು.

ಎಲ್ಲಾ ಪ್ರಾಣಿ ಪಕ್ಷಿಗಳು ಮುಖ್ಯವಾಗಿ ನಾಯಿ, ಹಸು, ಕೋಳಿ, ಕೋತಿ, ಆನೆ ಮುಂತಾದವು ಒಂದು ಚೂರೂ ಬಟ್ಟೆ ಹಾಕಿಕೊಳ್ಳದೆ, ನಮ್ಮಂತೆ ಆಸಕ್ತಿ, ಅವಕಾಶಕ್ಕೆ ಅನುಗುಣವಾಗಿ ಸಾರ್ವಜನಿಕವಾಗಿಯೇ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತವೆ ಮತ್ತು ತಮ್ಮ ವಾಂಚೆಗಳನ್ನು ಪೂರೈಸಿಕೊಂಡು ತಮ್ಮ ಪೀಳಿಗೆಯನ್ನು ಮುಂದುವರಿಸುತ್ತವೆ.

ಅಂದಮೇಲೆ ನಮ್ಮದೇನು ವಿಶೇಷವಿಲ್ಲ. ಅದಕ್ಕಿಂತ ಹೆಚ್ಚಾಗಿ ಅವುಗಳಿಗೆ ಯಾವುದೇ ನೀತಿ, ನಿಯಮ, ರಕ್ಷಣೆ, ಏನೂ ಇಲ್ಲ. ನಮಗಾದರೇ ಕುಟುಂಬ ವ್ಯವಸ್ಥೆ, ಪೊಲೀಸು, ಕಾನೂನು, ರಕ್ಷಣೆ ಎಲ್ಲವೂ ಇದೆ. ನಮ್ಮ ದೊಡ್ಡ ಅನುಭಾವಿಕ ಇತಿಹಾಸವು ಇದೆ. ಒಳ್ಳೆಯದು ಮತ್ತು ಕೆಟ್ಟದ್ದರ ಅರಿವಿದೆ. ಅಂದಮೇಲೆ ನಮಗೆ ಯಾವ ಶೀಲಾ ಅಶ್ಲೀಲ.

ಸಹಜವಾಗಿ ಬದುಕುವ ಯೋಗ್ಯತೆ ಇಲ್ಲದೇ, ಯಾರೋ ಹುಚ್ಚರು, ಇನ್ಯಾರೋ ಹೆಣ್ಣಿನ ಉಬ್ಬುತಗ್ಗುಗಳನ್ನು ತೋರಿಸಿದರೆ ಅದು ಆ ಹೆಣ್ಣಿನ ತಪ್ಪಲ್ಲ. ಅದನ್ನು ಅನಾವಶ್ಯಕವಾಗಿ ತೋರಿಸಿದವನ ವಿಕೃತಿಯಷ್ಟೇ. ಅದಕ್ಕೆ ಅವನನ್ನು ಹೊಣೆ ಮಾಡಬೇಕೇ ಹೊರೆತು ಹೆಣ್ಣನ್ನಲ್ಲ. ಜೊತೆಗೆ ಆ ರೀತಿ ಮಾಡಿದ ವ್ಯಕ್ತಿ ಸ್ವತಃ ತಾಯಿಯ ಯೋನಿಯಿಂದ ಜನಿಸಿ, ಆಕೆಯ ಎದೆ ಹಾಲು ಕುಡಿದು ಬೆಳೆದವನು. ನಾವೆಲ್ಲರೂ ಸಹ ಅದೇ ರೀತಿಯೇ ಹುಟ್ಟಿರುವುದು. ಅಷ್ಟೂ ತಿಳುವಳಿಕೆ ಇಲ್ಲದ ವ್ಯಕ್ತಿ ಈ ಸಮಾಜದ ನಾಗರಿಕನಾಗಲು ಅನರ್ಹ. ಅವನೊಬ್ಬ ಮಾನಸಿಕ ಅಸ್ವಸ್ಥ ಅಷ್ಟೇ. ಹುಚ್ಚಾಸ್ಪತ್ರೆಯ ರೋಗಿ ಎಂದೇ ಪರಿಗಣಿಸಬೇಕು.

ನಮ್ಮ ತಾಯಿ, ತಂಗಿ, ಅಕ್ಕ, ಅತ್ತಿಗೆ, ಅಜ್ಜಿ, ಸೊಸೆ, ಮಗಳು, ಹೆಂಡತಿ ಎಲ್ಲರೂ ಹೆಣ್ಣುಗಳೇ. ಅಂದಮೇಲೆ ಮತ್ತೊಂದು ಹೆಣ್ಣಿನ ಅವಹೇಳನ ಮಾಡುವುದು ವಿಕೃತಿಯೇ ಹೊರತು ಬೇರೇನೂ ಅಲ್ಲ. ವಿಕೃತರಿಗೆ ಹೆಚ್ಚಿನ ಮಹತ್ವ ಕೊಡುವ ಅವಶ್ಯಕತೆಯೂ ಇಲ್ಲ ಮತ್ತು ಹಾಗೆ ತೋರಿಸಿದರೆ ಅದನ್ನು ನಿರ್ಲಕ್ಷಿಸಿ ಮುಂದೆ ಹೋಗುವ ಮನಸ್ಥಿತಿಯನ್ನು ಗಂಡು ಹೆಣ್ಣು ಇಬ್ಬರೂ ಬೆಳೆಸಿಕೊಳ್ಳಬೇಕು.

ಹಾಗೆಯೇ ಇದರ ಇನ್ನೊಂದು ಮುಖವೂ ಇದೆ. ಇಂದು ಯಾರು ಪಾಪರಾಜಿಗಳನ್ನು, ಸಾಮಾಜಿಕ ಜಾಲತಾಣಗಳ ವಿಕೃತರನ್ನು ದೂರುತ್ತಿದ್ದಾರೆಯೋ, ಅದೇ ಸಿನಿಮಾ ನಟ ನಟಿಯರು ಚಿತ್ರರಂಗದಲ್ಲಿ ಇದೇ ಪಾಪರಾಜಿಗಳಂತೆ ದೃಶ್ಯವಿಕೃತಿಯನ್ನು ತಮ್ಮ ಚಿತ್ರಗಳಲ್ಲಿ ಯಾವ ರೀತಿ ತೋರಿಸುತ್ತಿದ್ದಾರೆ ಎಂಬುದನ್ನು ಪ್ರಶ್ನಿಸಬೇಕಾಗುತ್ತದೆ. ಪಾಪರಾಜಿಗಳಿಗೆ ನಿಜವಾದ ಪ್ರೇರಣೆ ನೀಡಿದ್ದೇ ಈ ಸಿನಿಮಾ ಮತ್ತು ಮಾಡೆಲಿಂಗ್ ಲೋಕದ ನಟ ನಟಿಯರು, ನಿರ್ಮಾಪಕರು ಮತ್ತು ನಿರ್ದೇಶಕರು.

ತಮ್ಮ ಸಿನಿಮಾಗಳಲ್ಲಿ ಇಂದು ಪಾಪರಾಜಿಗಳು ಮಾಡುವಂತೆ ಹೆಣ್ಣಿನ ಉಬ್ಬುತಗ್ಗುಗಳನ್ನು ಅತ್ಯಂತ ಕೆಟ್ಟದಾಗಿ, ಉದ್ದೇಶಪೂರ್ವಕವಾಗಿ, ನಿರ್ಧಿಷ್ಟವಾಗಿ ತೋರಿಸಿ ಅವರನ್ನು ಪ್ರಚೋದಿಸಿದ್ದು ಇದೇ ನಟ ನಟಿಯರು. ಹೆಣ್ಣನ್ನು ಭೋಗದ ವಸ್ತುವೆಂದು ಪರಿಗಣಿಸುವ ಧಾರ್ಮಿಕ ಮತಾಂಧತೆಯ ನಂತರ ಅತಿ ಹೆಚ್ಚು ಹೆಣ್ಣನ್ನು ದುರುಪಯೋಗಪಡಿಸಿಕೊಂಡಿರುವುದು ಈ ಮನರಂಜನಾ ಉದ್ಯಮೇ ಆಗಿದೆ. ಇದೇ ನಟ ನಟಿಯರೇ ಅಲ್ಲಿ ಕೆಟ್ಟದಾಗಿ ನರ್ತಿಸಿ ಈಗ ಪಾಪರಾಜಿಗಳನ್ನು ನಿಂದಿಸುತ್ತಿರುವುದು.

ಇದರ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಅಭಿನಯ, ಕಥೆ, ಸಿನಿಮಾ ಎಲ್ಲವೂ ಸಹನೀಯ. ಆದರೆ ಉದ್ದೇಶಪೂರ್ವಕವಾಗಿ ಹೆಣ್ಣಿನ ಅಂಗಾಂಗಗಳ ಪ್ರದರ್ಶನಗಳ ಮೂಲಕವೇ ಬೆಳೆದು ಬಂದಿರುವುದು ಈ ಸಿನಿಮಾ ಎಂಬ ಪ್ರದರ್ಶನ ಉದ್ಯಮ.

ಆದ್ದರಿಂದ ಅಲ್ಲಿಯೂ ಕೂಡ ನಿಯಂತ್ರಣವನ್ನು ಸಾಧಿಸಬೇಕು. ಸಮಾಜದ ಮೌಲ್ಯಗಳನ್ನ ಎತ್ತಿ ಹಿಡಿಯಬೇಕು. ವ್ಯವಹಾರ, ಪ್ರಖ್ಯಾತಿ, ಹಣವೇ ಪ್ರಧಾನವಾಗಿ, ಮೌಲ್ಯಗಳ ಅಧ:ಪತನಕ್ಕೆ ಕಾರಣವಾಗಿ, ಈಗ ಅವರುಗಳು ಈ ಬಗ್ಗೆ ಮಾತನಾಡುವುದು ಆತ್ಮ ವಂಚನೆಯಾಗುತ್ತದೆ. ಯಾವುದೇ ಸಭೆ ಸಮಾರಂಭ ಪಾರ್ಟಿಗಳಲ್ಲಿ ಅತ್ಯಂತ ಕೃತಕ ಮತ್ತು ಅಸಹಜವಾಗಿ ತಮ್ಮನ್ನು ಬಿಂಬಿಸಿಕೊಳ್ಳುವ ಇದೇ ನಟ ನಟಿಯರು, ಈ ಪಾಪರಾಜಿಗಳ ಅತಿರೇಕಕ್ಕೆ ಮೂಲ ಕಾರಣವೂ ಹೌದಲ್ಲವೇ. ಆದ್ದರಿಂದ ಇಡೀ ಸಮಾಜದಲ್ಲಿ ಒಳ್ಳೆಯದನ್ನು, ಒಳ್ಳೆಯತನವನ್ನು, ಒಳ್ಳೆಯ ತಿಳುವಳಿಕೆಯನ್ನು, ಒಳ್ಳೆಯ ನಡವಳಿಕೆಯನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು. ಆಗ ಕೆಟ್ಟದ್ದನ್ನು ಪ್ರಶ್ನಿಸುವ ನೈತಿಕತೆ ನಮ್ಮದಾಗುತ್ತದೆ. ಇಲ್ಲದಿದ್ದರೆ ಮುಂದೊಂದು ದಿನ ನೈತಿಕ ಮೌಲ್ಯಗಳು ಕುಸಿದಾಗ ನಾವು ಅದನ್ನು ಪ್ರಶ್ನಿಸಲು ಕಷ್ಟವಾಗುತ್ತದೆ.

ಹೆಣ್ಣಿನ ಸಮಾನತೆ, ಸ್ವಾತಂತ್ರ್ಯ, ಮುಕ್ತತೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತ,

" ಮೊಲೆ ಮುಡಿ ಬಂದರೆ ಹೆಣ್ಣೆಂಬರು,
ಗಡ್ಡ ಮೀಸೆ ಬಂದರೆ ಗಂಡೆಂಬರು,
ನಡುವೆ ಸುಳಿವ ಆತ್ಮನು ಗಂಡು ಅಲ್ಲ ಹೆಣ್ಣು ಅಲ್ಲ ಕಾಣ ರಾಮನಾಥ....."
ಜೇಡರ ದಾಸಿಮಯ್ಯ.......

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,
ವಿವೇಕಾನಂದ. ಎಚ್. ಕೆ. 9663750451.......

# ಎದೆ ಸುಟ್ಟರೂ ಗುಟ್ಟು ಬಿಟ್ಟುಕೊಡದವಳು: ಭಾರತದ ಮೊದಲ ಮಹಿಳಾ ಗೂಢಾಚಾರಿಣಿ ನೀರಾ

ಅದು 1943ರ ಒಂದು ಕಗ್ಗತ್ತಲೆಯ ರಾತ್ರಿ. ಅಂಡಮಾನ್‌ನ ಸೆಲ್ಯುಲಾರ್ ಜೈಲಿನ ಕಟ್ಟಕಡೆಯ ಕೋಣೆಯಲ್ಲಿ, ಕಬ್ಬಿಣದ ಸಾಲುಗಳ ಹಿಂದೆ, ಒಬ್ಬಳು ಯುವತಿ ನಿಂತಿದ್ದಳು. ಅವಳ ದೇಹದ ಮೇಲೆಲ್ಲಾ ಗಾಯಗಳು, ರಕ್ತದ ಕಲೆಗಳು. ಬ್ರಿಟಿಷ್ ಅಧಿಕಾರಿ ರೋಷದಿಂದ ಕೂಗಿದ, "ನೇತಾಜಿ ಎಲ್ಲಿ ಅಡಗಿದ್ದಾರೆ? ಹೇಳು, ಇಲ್ಲವೇ ಇಂದು ನಿನ್ನ ಕೊನೆಯ ದಿನ!" ಅವಳು ನಿಧಾನವಾಗಿ ತನ್ನದೆಯತ್ತ ಬೊಟ್ಟು ಮಾಡಿ ನಗುತ್ತಾ ಹೇಳಿದಳು: "ನೇತಾಜಿ ಇಲ್ಲಿಯೇ ಇದ್ದಾರೆ ನನ್ನ ಹೃದಯದಲ್ಲಿ. ಅವರನ್ನು ಹೊರತೆಗೆಯಬೇಕಾದರೆ, ನನ್ನ ಹೃದಯವನ್ನೇ ಸೀಳಬೇಕು!". ಆ ಮಾತು ಕೇಳಿ ಅಧಿಕಾರಿ ಕುಪಿತಗೊಂಡ, ಕೆಂಡದಂತಹ ಕಬ್ಬಿಣದ ಉಪಕರಣವನ್ನು ಕುಲುಮೆಯಿಂದ ತೆಗೆದು ಅವಳ ಎದೆಗೆ ಒತ್ತಿಯೇ ಬಿಟ್ಟ. ಚರ್ಮ ಸುಟ್ಟಿತು, ನೋವಿನಿಂದ ಆಕೆ ನರಳಾಡಿದಳು ಆದರೆ ಅವಳ ತುಟಿಯಿಂದ ಒಂದೇ ಒಂದು ಮಾತೂ ಹೊರಬರಲಿಲ್ಲ. ಆ ಯುವತಿಯ ಹೆಸರೇ ನೀರಾ ಆರ್ಯ. ಭಾರತದ ಮೊದಲ ಮಹಿಳಾ ಗೂಢಾಚಾರಿಣಿ ಎಂಬ ಹೆಗ್ಗಳಿಕೆ ಪಡೆದವಳು. ಪದಗಳಿಗೆ ಮೀರಿದ ತ್ಯಾಗ ಮಾಡಿದವಳು. ಅವಳ ಈ ತ್ಯಾಗದ ಹಿಂದೆ ಧೈರ್ಯವಿದೆ, ಶೋಕವಿದೆ. ಮಿಗಿಲಾಗಿ ದೇಶಭಕ್ತಿಯಿದೆ. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಬಗೆಗಿನ ಸಮರ್ಪಣೆ ಇದೆ. ಅಷ್ಟಕ್ಕೂ ಆಕೆ ಭಾರತದ ಮೊದಲ ಗೂಢಾಚಾರಿಣಿಯಾಗಿ ಸಾಹಸ ಮೆರೆದಿದ್ದು ಹೇಗೆ ಎಂಬುದರ ಹಿಂದೆಯೂ ಒಂದು ರೋಚಕ ಕಥೆ ಇದೆ.




### ನೇತಾಜಿ ಪ್ರೇರಣೆಯಿಂದ ಭಾರತಕ್ಕೆ ಸಿಕ್ಕಳು ಮೊದಲ ಮಹಿಳಾ ಗೂಢಾಚಾರಿಣಿ

ಉತ್ತರ ಪ್ರದೇಶದ ಶ್ರೀಮಂತ ಕುಟುಂಬದಲ್ಲಿ 1902ರ ಮಾರ್ಚ್ 5 ರಂದು ಜನಿಸಿದ್ದ ಆಕೆಯನ್ನು ದೇಶಭಕ್ತಿಯ ಜ್ವಾಲೆ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಆಝಾದ್ ಹಿಂದ್ ಫೌಜ್‌ನ ರಾಣಿ ಝಾನ್ಸಿ ರೆಜಿಮೆಂಟ್‌ನತ್ತ ಕೊಂಡೊಯ್ಯಿತು. ಆದರೆ ಆಕೆಯ ತಂದೆ ಚಿಕ್ಕ ವಯಸ್ಸಲ್ಲೇ ಅವಳ ವಿವಾಹವನ್ನು ಬ್ರಿಟಿಷ್ ಸೇನೆಯ ಸಿಐಡಿ ಇನ್‌ಸ್ಪೆಕ್ಟರ್ ಶ್ರೀಕಾಂತ್ ಜೈ ರಂಜನ್ ದಾಸ್ ಅವರೊಂದಿಗೆ ನೆರವೇರಿಸಿದ್ದರು. ಆರಂಭದಲ್ಲಿ ದಾಂಪತ್ಯ ಜೀವನ ಚೆನ್ನಾಗಿಯೇ ಇತ್ತು, ಆದರೆ ಬರು ಬರುತ್ತಾ ಅದು ದೇಶಭಕ್ತಿಯ ಪರೀಕ್ಷೆಯಾಗಿ ಪರಿವರ್ತನೆಗೊಂಡಿತು. ನೀರಾ ಅವರು ರಹಸ್ಯವಾಗಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಆಝಾದ್ ಹಿಂದ್ ಫೌಜ್‌ನ ರಾಣಿ ಝಾನ್ಸಿ ರೆಜಿಮೆಂಟ್‌ಗೆ ಸೇರಿದರು. ಅಲ್ಲಿಂದ ಅವರ ಜೀವನದಲ್ಲಿ ತ್ಯಾಗದ ಅಧ್ಯಾಯಗಳು ಆರಂಭವಾದವು. ಒಂದು ದಿನ, ಶ್ರೀಕಾಂತ್ ಅವರು ನೀರಾ ಅವರನ್ನು ಹಿಂಬಾಲಿಸಿ ರಹಸ್ಯ ಸಭೆಯ ಸ್ಥಳಕ್ಕೆ ತಲುಪಿ ನೇತಾಜಿ ಅವರ ಮೇಲೆ ಗುಂಡು ಹಾರಿಸಿಯೇ ಬಿಟ್ಟರು. ಆದರೆ ಗುರಿ ತಪ್ಪಿ ನೇತಾಜಿ ಅವರ ಚಾಲಕನನ್ನು ಈ ಗುಂಡು ತಲುಪಿತ್ತು ಆತ ಅಲ್ಲೇ ಅಸುನೀಗಿದ. ಈ ಸಂದರ್ಭದಲ್ಲಿ ತನ್ನ ದೇಶ ಮತ್ತು ನಾಯಕನನ್ನು ರಕ್ಷಿಸುವ ಸಲುವಾಗಿ ನೀರಾ ಕಿಂಚಿತ್ತೂ ಹಿಂದೆ ಮುಂದೆ ನೋಡದೆ ಕಠಿಣ ನಿರ್ಧಾರವನ್ನು ತೆಗೆದುಕೊಂಡೇ ಬಿಟ್ಟಳು – ತನ್ನ ಪತಿಯನ್ನು ಚಾಕುವಿನಿಂದ ಇರಿದು ಕೊಂದು ಹಾಕಿದಳು. ಆಕೆಯ ಈ ಕಾರ್ಯ ಅವಳ ವೈಯಕ್ತಿಕ ಜೀವನದ ಅತ್ಯಂತ ಕರಾಳ ಭಾಗವಾಗಿತ್ತು. ಆದರೆ ನೇತಾಜಿ ಅವರು ಆಕೆಯ ಧೈರ್ಯಕ್ಕೆ ಮೆಚ್ಚಿ, ಅವಳನ್ನು ಆಝಾದ್ ಹಿಂದ್ ಫೌಜ್‌ನ ಮೊದಲ ಮಹಿಳಾ ಗೂಢಚಾರಿಕೆಯಾಗಿ ನೇಮಿಸಿದರು. ಅವಳನ್ನು "ನೀರಾ–ನಾಗಿನಿ" ಎಂದು ಕರೆದರು. ನೀರಾ ನಾಗಿನಿ ಎಂದರೆ ಸರ್ಪಗಳ ರಾಣಿಯಂತೆ ತೀಕ್ಷ್ಣಮತಿ ಎಂದು. ಇಲ್ಲಿಂದ ಗೂಢಾಚಾರಿಣಿಯಾಗಿ ಆಕೆ ಜೀವನದ ಗತಿ ಬದಲಾಯಿತು. ಸಾಹಸ, ಧೈರ್ಯ ಆಕೆಯ ಗುರುತಾಯಿತು.

### ಗೂಢಾಚಾರಣಿಯಾಗಿ ನೀರಾ ಮಾಡಿದ ಸಾಹಸಕ್ಕೆ ಮಿತಿಯೇ ಇಲ್ಲ

ಗೂಢಚರ್ಯೆಯಲ್ಲಿ ನೀರಾ ಅವರು ಸರಸ್ವತಿ ರಾಜಮಣಿ ( ಐಎಎನ ಮಿಲಿಟರಿ ಇಂಟೆಲಿಜೆನ್ಸ್ ವಿಭಾಗದಲ್ಲಿ ಕೆಲಸ ಮಾಡಿದ ವೀರಾಂಗನೆ) ಅವರ ಜೊತೆಗೂಡಿ ಕೆಲಸ ಮಾಡಿದರು. ಇಬ್ಬರೂ ಹುಡುಗರ ವೇಷ ಧರಿಸಿ ಬ್ರಿಟಿಷ್ ಅಧಿಕಾರಿಗಳ ಮನೆಗಳು ಮತ್ತು ಶಿಬಿರಗಳಲ್ಲಿ ಗುಪ್ತಚರ ಮಾಹಿತಿ ಸಂಗ್ರಹಿಸುತ್ತಿದ್ದರು. ಶಸ್ತ್ರಾಸ್ತ್ರಗಳನ್ನು ಕಳ್ಳಸಾಗಾಣಿಕೆ ಮಾಡಿದರು. ಒಂದು ಬಾರಿ ಅವರ ಸಹೋದ್ಯೋಗಿ ದುರ್ಗಾಮಲ್ಲ ಗೋರ್ಖಾ ಅವರು ಬ್ರಿಟಿಷರ ಕೈಗೆ ಸಿಕ್ಕಿಬಿದ್ದಾಗ, ನೀರಾ ಮತ್ತು ಸರಸ್ವತಿ ತೃತೀಯ ಲಿಂಗಿಗಳಂತೆ ವೇಷ ಧರಿಸಿ ಜೈಲಿಗೆ ನುಗ್ಗಿ, ಮಾದಕ ದ್ರವ್ಯ ಕೊಟ್ಟು ಕಾವಲುಗಾರರನ್ನು ಮೂರ್ಛೆ ಹೋಗುವಂತೆ ಮಾಡಿ ಅವರನ್ನು ರಕ್ಷಿಸಿದರು. ಆದರೆ ತಪ್ಪಿಸಿಕೊಳ್ಳುವಾಗ ಸರಸ್ವತಿ ಅವರ ಕಾಲಿಗೆ ಗುಂಡು ತಗುಲಿತ್ತು. ಮೂರು ದಿನಗಳ ಕಾಲ ಕಾಡಿನ ಮರದ ಮೇಲೆ ಅಡಗಿಕೊಂಡು ಅವರು ತಮ್ಮ ಪ್ರಾಣ ಉಳಿಸಿಕೊಂಡರು. ನೇತಾಜಿ ಅವರು ಅವರ ಸಾಹಸಕ್ಕೆ ಮೆಚ್ಚಿ ನೀರಾ ಅವರನ್ನು ಕ್ಯಾಪ್ಟನ್ ಮತ್ತು ಸರಸ್ವತಿ ಅವರನ್ನು ಲೆಫ್ಟಿನೆಂಟ್ ಆಗಿ ನೇಮಿಸಿದರು. ನೀರಾ ಅವರಿಗೆ ನೇತಾಜಿ ಅವರ ಭದ್ರತೆಯ ಜವಾಬ್ದಾರಿಯನ್ನೂ ನೀಡಲಾಯಿತು.

ಬ್ರಿಟಿಷರ ಕೈಗೆ ಸಿಕ್ಕಿಬಿದ್ದಾಗ ನೀರಾ ಅನುಭವಿಸಿದ ಯಾತನೆ ಅತಿ ಘೋರ

ಗೂಢಾಚಾರಿಣಿಯಾಗಿ ಬ್ರಿಟಿಷರ ವಿರುದ್ಧ ಮಾಹಿತಿಗಳನ್ನ ಸಂಗ್ರಹಿಸಿ ಆಜಾದ್ ಹಿಂದ್ ಫೌಜ್‌ಗೆ ತಲುಪಿಸುತ್ತಿದ್ದ ನೀರಾ ಒಂದು ದಿನ ಬ್ರಿಟಿಷರ ಕೈಗೆ ಸಿಕ್ಕಿ ಬೀಳಬೇಕಾದ ಪರಿಸ್ಥಿತಿ ಬಂದೇ ಬಿಟ್ಟಿತು. ಬ್ರಿಟಿಷರು ಆಕೆಯನ್ನು ಕಾಲಾಪಾನಿ ಜೈಲಿನಲ್ಲಿ ವರ್ಷಗಳ ಕಾಲ ಇಟ್ಟು ಕ್ರೂರ ಚಿತ್ರಹಿಂಸೆಯನ್ನು ನೀಡಿದರು. ಪ್ರತಿ ಶಿಕ್ಷೆಯನ್ನು ಆಕೆ ಸಹಿಸಿಕೊಂಡಲೇ ಹೊರತು ನೇತಾಜೀ ಅವರ ಕಾರ್ಯಾಚರಣೆಯ ಬಗೆಗಿನ ರಹಸ್ಯವನ್ನು ಆಕೆ ಬಾಯಿ ಬಿಡಲಿಲ್ಲ. ನೇತಾಜಿ ಅವರು ಇರುವ ಸ್ಥಳದ ಬಗ್ಗೆ ಮಾಹಿತಿ ನೀಡುವಂತೆ ಒತ್ತಡಹೇರಿ ತೀವ್ರ ದೈಹಿಕ ಮತ್ತು ಮಾನಸಿಕ ಚಿತ್ರಹಿಂಸೆ ನೀಡಲಾಯಿತು. ಆಕೆ "ನೇತಾಜಿ ನನ್ನ ಹೃದಯದಲ್ಲಿ ಇದ್ದಾರೆ" ಎಂದಾಗ, ಜೈಲರ್ ಅವಳ ಎದೆಗೆ ಬೆಂಕಿಯಿಂದ ಬರೆ ಎಳೆದು ಸ್ತನಗಳನ್ನು ವಿಕೃತಗೊಳಿಸುವ ಪ್ರಯತ್ನ ಮಾಡಿದ್ದ. ಆದರೂ ಆಕೆ ಎದೆಗುಂದದೆ ಅಚಲವಾಗಿ ದೇಶಭಕ್ತಿ ಮೆರೆದಿದ್ದಳು. ಸ್ವಾತಂತ್ರ್ಯದ ನಂತರ 1947 ರಲ್ಲಿ ಆಕೆಯು ಜೈಲಿನಿಂದ ಬಿಡುಗಡೆಯಾದಳು.

### ಅಪ್ರತಿಮ ತ್ಯಾಗ ಮಾಡಿದರೂ ಪುರಸ್ಕಾರ ಮನ್ನಣೆ ಪಡೆಯಲಿಲ್ಲ

ನೀರಾ ಆರ್ಯ ಸಿರಿವಂತ ಕುಟುಂಬದಲ್ಲಿ ಜನಿಸಿದಳು. ಆದರೆ ದೇಶಕ್ಕಾಗಿ ಆಕೆ ತುಳಿದಿದ್ದು ಸಂಘರ್ಷದ ಹಾದಿಯನ್ನು. ಸ್ವಾತಂತ್ರ್ಯ ಬಂದ ಬಳಿಕವೂ ಆಕೆ ಸರ್ಕಾರದಿಂದ ಯಾವುದೇ ಗೌರವವನ್ನು ಪಡೆಯಲಿಲ್ಲ. ಅದಕ್ಕೆ ಆಕೆ ಬಯಸಿದವಳೂ ಅಲ್ಲ. ಹೈದರಾಬಾದ್‌ನಲ್ಲಿ ಬಡತನದಲ್ಲಿ ಹೂವು ಮಾರಾಟ ಮಾಡಿ ಜೀವನ ನಡೆಸಿದಳು. ಸರ್ಕಾರಿ ಪಿಂಚಣಿ ಬೇಡವೆಂದು ನಿರಾಕರಿಸಿದಳು. 1998ರಲ್ಲಿ ಆಕೆ ಇಹಲೋಕ ತ್ಯಜಿಸಿ ಅಮರಳಾಗಿ ಉಳಿದಳು..

ನೀರಾ ಆರ್ಯ ಕಥೆ ಕೇವಲ ಧೈರ್ಯದ ಕಥೆಯಲ್ಲ. ಅದು ದೇಶಕ್ಕಾಗಿ ಪ್ರೀತಿ, ಕುಟುಂಬ, ಗೌರವ ಎಲ್ಲವನ್ನೂ ತ್ಯಾಗ ಮಾಡಿದ ವೀರ ಮಹಿಳೆಯ ಕಥೆ. ಆಕೆಯ ಜೀವನಗಾಥೆ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ತ್ಯಾಗವನ್ನು ಎತ್ತಿ ತೋರಿಸುತ್ತದೆ. ಅವಳ ಜೀವನವು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ತ್ಯಾಗದ ಅತ್ಯುನ್ನತ ಉದಾಹರಣೆಯಾಗಿದೆ. ಪತಿ, ಕುಟುಂಬ, ದೇಹದ ಗೌರವ, ಸುಖೀ ಜೀವನ – ಎಲ್ಲವನ್ನೂ ದೇಶಕ್ಕಾಗಿ ಬಲಿಕೊಟ್ಟ ಅವಳು, ತನ್ನ ಹೃದಯದಲ್ಲಿ ನೇತಾಜಿಯನ್ನು ಹೊತ್ತುಕೊಂಡು ಕಾಲಾಪಾನಿಯ ಕಗ್ಗತ್ತಲೆಯಲ್ಲಿ ಧೈರ್ಯದಿಂದ ನಿಂತಳು. ಅವಳ ರಕ್ತದಿಂದ ಬರೆದ ಜೀವನ ಕಥೆ ಇತಿಹಾಸದಲ್ಲಿ ದೀರ್ಘಕಾಲ ಮರೆಯಾಗಿದ್ದವು, ಆದರೆ ಇಂದು ಅವುಗಳು ಮತ್ತೆ ಬೆಳಕಿಗೆ ಬಂದಿವೆ – ಸ್ಮಾರಕಗಳು, ಪುಸ್ತಕಗಳು, ಚಲನಚಿತ್ರಗಳ ಮೂಲಕ. ಸ್ವಾತಂತ್ರ್ಯವು ಕೇವಲ ಯುದ್ಧಭೂಮಿಯಲ್ಲಿ ಗೆದ್ದದ್ದಲ್ಲ, ಅದು ಅನೇಕ ಅನಾಮಧೇಯ ಹೃದಯಗಳು ಸಹಿಸಿದ ನೋವುಗಳಿಂದ ನಿರ್ಮಿತವಾಯಿತು. ಅವಳಂತಹ ವೀರಾಂಗನೆಯರ ತ್ಯಾಗವಿಲ್ಲದಿದ್ದರೆ ಇಂದಿನ ಭಾರತವಿರುತ್ತಿರಲಿಲ್ಲ. ಅವಳ ಕಥೆಯು ಶಾಶ್ವತವಾಗಿ ಉಳಿಯಲಿ – ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ನೇತಾಜಿಯಂತೆಯೇ ಧೈರ್ಯ ಮತ್ತು ನಿಷ್ಠೆಯ ದೀಪವಾಗಿ ಉರಿಯಲಿ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ನಿಲುವು, ಸಂಸ್ಕೃತಿ ಮತ್ತು ದ್ವಂದ್ವ ಒಂದು ಪ್ರಶ್ನೆ

ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಹಿತ್ಯ ವಲಯದಲ್ಲೂ, ಸಾಮಾಜಿಕ ಜಾಲತಾಣಗಳಲ್ಲೂ ಲೇಖಕಿ ಭಾನು ಮುಷ್ತಾಕ್ ಅವರ ಹೇಳಿಕೆಗಳು ಮತ್ತು ನಡೆಗಳು ದೊಡ್ಡ ಚರ್ಚೆಗೆ ಕಾರಣವಾಗಿವೆ. ಈ ಚರ್ಚೆ ಕೇವಲ ವ್ಯಕ್ತಿಯ ಬಗ್ಗೆ ಅಲ್ಲ ಅದು ನಮ್ಮ ಸಂಸ್ಕೃತಿ, ನಂಬಿಕೆಗಳು ಮತ್ತು ನಿಲುವುಗಳ ಬಗ್ಗೆ ಕೂಡ ಒಂದು ಪ್ರಶ್ನೆ ಎತ್ತುತ್ತದೆ.

ಗೌರವ ಮತ್ತು ಅಭಿವ್ಯಕ್ತಿ

ಡಾ.ಬಿ.ಆರ್ ಅಂಬೇಡ್ಕರ್ ಅವರು ಭಾರತದ ಮಹಾನ್ ಚಿಂತಕ, ಸಮಾಜ ಸುಧಾರಕ, ಸಂವಿಧಾನದ ಶಿಲ್ಪಿ. ಅವರ ಭಾವಚಿತ್ರಕ್ಕೆ ಗೌರವ ಸಲ್ಲಿಸುವುದು ಒಂದು ಸಾಮಾನ್ಯ ಸಾಮಾಜಿಕ ಮೌಲ್ಯ. ಅವರ ಮುಂದೆ ಚಪ್ಪಲಿ ಧರಿಸಿ ನಿಂತು ಗೌರವ ಸಲ್ಲಿಸುವುದು ಇದನ್ನು ಕೆಲವರು ವೈಯಕ್ತಿಕ ಅಭಿವ್ಯಕ್ತಿ ಎಂದು ಹೇಳಬಹುದು. ಅದಕ್ಕೆ ವಿರೋಧ ವ್ಯಕ್ತ ಬಂದ ತಕ್ಷಣ "ಚಪ್ಪಲಿಗಳು ನನ್ನ ಮನೆಯ ದೇವರು" ಎಂದು ಹೇಳಿದರು. ಸರಿ ಹಾಗಾದರೆ ಚಪ್ಪಲಿ ಎಂಬುದು ಅದು ಕೇವಲ ಅಲ್ಲ, ಅದು ನಮ್ಮ ಕಾಲಿಗೆ ಮುಳ್ಳುಗಳಿಂದ, ಹೇಸಿಗೆಯಿಂದ, ಕೊಳಚೆಯಿಂದ ಮತ್ತು ಸುಡು ಬಿಸಿಲಿನಿಂದ ಅದು ನಮಗೆ ರಕ್ಷಣೆ ಕೊಡುತ್ತದೆ ಅದಕ್ಕೆ ಅದನ್ನು ಪಾದರಕ್ಷೆಗಳು ಎಂದು ಕರೆಯುತ್ತಾರೆ. ಇದನ್ನ ನಿಮ್ಮ ಮಾತಿನ ಪ್ರಕಾರ ಹೋದರೆ ಇಸ್ಲಾಂ ಧರ್ಮದ ಧಾರ್ಮಿಕ ಸ್ಥಳದಲ್ಲಿ ನಿಮ್ಮ ಮನೆಯ ದೇವರಾದ ಚಪ್ಪಲಿಗಳನ್ನು ಹಾಕಿಕೊಂಡು ಒಳಗೆ ಹೊಗಲು ಅನುಮತಿ ಇದೆಯಾ? ಇಲ್ಲ ಆ ಧೈರ್ಯ ನಿಮಗೆ ಇದೆಯಾ? ನಿಮಗೆ ನೀವೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು.

ಚಪ್ಪಲಿ ಕುರಿತು ನಿಮ್ಮ ಈ ಹೇಳಿಕೆ ಸಮಾಜದ ಬಹುಪಾಲು ಜನರ ಮನಸ್ಸಿಗೆ ನೋವುಂಟುಮಾಡಿದೆ. ಅದನ್ನು "ಸ್ವಾತಂತ್ರ್ಯ" ಎಂದು ಮಾತ್ರ ಸಮರ್ಥಿಸಬಹುದೇ? ಸ್ವಾತಂತ್ರ್ಯಕ್ಕೆ ಮಿತಿ ಇಲ್ಲವೆ?ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಆದರೆ ಅದಕ್ಕೂ ಒಂದು ಸಾಮಾಜಿಕ ಹೊಣೆಗಾರಿಕೆ ಇದೆ ಅಲ್ಲವೆ. ನಮ್ಮ ಮಾತುಗಳು, ನಮ್ಮ ನಡೆಗಳು ಇವು ಸಮಾಜದಲ್ಲಿ ಯಾವ ಪರಿಣಾಮ ಉಂಟುಮಾಡುತ್ತವೆ ಎಂಬುದನ್ನು ಗಮನಿಸಬೇಕು.

ಸಂಸ್ಕೃತಿಯ ಕುರಿತು ಮಾತಾಡುವಾಗ

ಈ ಹಿಂದೆ ನಿಮ್ಮ ಭಾಷಣದಲ್ಲಿ ಕನ್ನಡಮ್ಮನ ಮೇಲೆ ಭಾರಿ ವಿವಾದಾತ್ಮಕ ಹೇಳಿಕೆ ನೀಡಿದ್ದಿರಿ. ನಮ್ಮ ಕನ್ನಡನಾಡಿನಲ್ಲಿ "ಭುವನೇಶ್ವರಿ ತಾಯಿ" ಎಂಬುದು ಕೇವಲ ಒಂದು ಪ್ರತಿಮೆ ಅಲ್ಲ. ಅದು ಒಂದು ಸಂಸ್ಕೃತಿಯ ಸಂಕೇತ. ಅರಿಶಿಣ, ಕುಂಕುಮ, ಪೂಜೆ ಇವುಗಳು ಶತಮಾನಗಳಿಂದ ಬಂದಿರುವ ನಮ್ಮ ಆಚರಣೆಗಳು. ಮರಳುಗಾಡಿನ ಧರ್ಮದಲ್ಲಿ ಈ ವಿಶೇಷತೆಗಳು ಕಂಡು ಬರುವುದಿಲ್ಲ. ಆ ಧರ್ಮದವರೆ ಆಗಿರುವ ಭಾನು ಮುಷ್ತಾಕ್ ರವರು ಒಮ್ಮೆ ಯೋಚಿಸಿ ಭಾಷಣ ಮಾಡಬೇಕಿತ್ತು. ಅದೇ ಮರಳುಗಾಡಿನ ಧರ್ಮದವರಾದ ನಿಸಾರ್ ಅಹ್ಮದ್ ಅವರ ನಿತ್ಯೋತ್ಸವ ತಾಯಿ ನಿನಗೆ ನಿತ್ಯೋತ್ಸವದ ಕವನದಲ್ಲಿ ಕರ್ನಾಟಕದ ಸೌಂದರ್ಯ, ಸಂಸ್ಕೃತಿ ಮತ್ತು ತಾಯಿ ಭೂಮಿಯ ಮಹತ್ವವನ್ನು ಕೊಂಡಾಡುತ್ತದೆ. ಈ ವಿಚಾರದಲ್ಲಿ ನಿಸಾರ್ ಅಹಮದ್ ಅವರು ಕನ್ನಡಿಗರ ಮನಸ್ಸನ್ನು ಗೆಲ್ಲುತ್ತಾರೆ. ಇವುಗಳನ್ನು ಒಪ್ಪಿಕೊಳ್ಳುವುದು ಅಥವಾ ಒಪ್ಪಿಕೊಳ್ಳದಿರುವುದು ಪ್ರತಿಯೊಬ್ಬರ ವೈಯಕ್ತಿಕ ಆಯ್ಕೆ. ಆದರೆ ಒಪ್ಪಿಕೊಳ್ಳದಿದ್ದರೆ, ಅದನ್ನು ಗೌರವದಿಂದ ಬಿಟ್ಟುಬಿಡಬಹುದು. ಸಾರ್ವಜನಿಕವಾಗಿ ಈ ರೀತಿಯ ಹೇಳಿಕೆ ನೀಡುವುದು ಸರಿಯಲ್ಲ.

ದ್ವಂದ್ವ ನಿಲುವು

ಇಲ್ಲಿ ಮುಖ್ಯ ಪ್ರಶ್ನೆ ಏನು ಅಂದರೆ, ಭುವನೇಶ್ವರಿ ತಾಯಿಯನ್ನು ವಿರೋಧಿಸುವವರು ಹೇಗೆ ಚಾಮುಂಡೇಶ್ವರಿ ದೇವಸ್ಥಾನದ ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ?ಚಾಮುಂಡೇಶ್ವರಿ ದೇವಿ ಕೂಡ ಒಂದು ಭಕ್ತಿ ಮತ್ತು ಸಂಪ್ರದಾಯದ ಪ್ರತೀಕವೇ. ಬಹುಪಾಲು ಕನ್ನಡಿಗರು ಈ ವಿಷಯದಲ್ಲಿ ನಿಮ್ಮನ್ನು ವಿರೋಧ ಮಾಡಿದವರೆ. ಅದನ್ನು ಅರ್ಥ ಮಾಡಿಕೊಳ್ಳದೆ ದಸರಾ ಹಬ್ಬದಲ್ಲಿ ಚಾಮುಂಡೇಶ್ವರಿಗೆ ಕೈಮುಗಿದು ಪುಷ್ಪ ನಮನ ಮಾಡಿದ್ರಿ. ಇದು ನಿಮಗೆ ಶೋಭೆ ತಂದುಕೊಟ್ಟಿದೆಯಾ? ಅಂತ ನಿಮ್ಮನ್ನ ನೀವೆ ಪ್ರಶ್ನೆ ಮಾಡಿಕೊಳ್ಳಿ ಒಮ್ಮೆ. ಅದೇ ನಿಸಾರ್ ಅಹಮದ್ ಅವರು ಕೂಡ ಒಮ್ಮೆ ದಸರಾ ಹಬ್ಬದಲ್ಲಿ ಚಾಮುಂಡೇಶ್ವರಿಗೆ ಪುಷ್ಪ ನಮನ ಮಾಡಿದ್ರು ಇದಕ್ಕೆ ಯಾರು ಕೂಡ ವಿರೋಧ ಮಾಡಿರಲಿಲ್ಲ. ಯಾಕೆ? ಅನ್ನೋದು ನಿಮಗೆ ನೀವೆ ಪ್ರಶ್ನೆ ಮಾಡಿಕೊಂಡರೆ ಉತ್ತರ ಸುಲಭವಾಗಿ ಸಿಗುತ್ತದೆ. ಒಂದನ್ನು "ಮೂಢನಂಬಿಕೆ" ಎಂದು ಕರೆಯುವುದು ಮತ್ತೊಂದರಲ್ಲಿ ಭಾಗವಹಿಸುವುದು.

ಕೊನೆಯ ಮಾತು

ಈ ಎಲ್ಲಾ ಘಟನೆಗಳನ್ನು ನೋಡಿದಾಗ ಒಂದು ಪ್ರಶ್ನೆ ಉದ್ಭವಿಸುತ್ತದೆ. ನಿಮ್ಮ ನಿಜವಾದ ನಿಲುವು ಏನು? ಅಥವಾ ಸಂದರ್ಭಕ್ಕೆ ತಕ್ಕಂತೆ ಬದಲಾಗುವ ನಿಲುವೇ? ಸಂಸ್ಕೃತಿಯನ್ನು ವಿರೋಧಿಸುವುದು ತಪ್ಪಲ್ಲ. ಆದರೆ ಅದರಲ್ಲಿ ಸ್ಥಿರತೆ ಮತ್ತು ಸ್ಪಷ್ಟತೆ ಇರಬೇಕು. ಇಲ್ಲದಿದ್ದರೆ ಅದು ದ್ವಂದ್ವವಾಗಿ ಕಾಣಬಹುದು ಅಥವಾ ಸ್ವಾರ್ಥದಂತೆ ಭಾಸವಾಗಬಹುದು

ಸಾರಾಂಶ

ನಮ್ಮ ಸಮಾಜದಲ್ಲಿ ಭಿನ್ನಾಭಿಪ್ರಾಯಗಳು ಸಹಜ. ಆದರೆ ಗೌರವ ಕಾಪಾಡಿಕೊಂಡು ಮಾತನಾಡುವುದು, ಸ್ಪಷ್ಟ ಮತ್ತು ಸ್ಥಿರ ನಿಲುವು ಇರುವುದು ಇವುಗಳೇ ನಿಜವಾದ ಬೌದ್ಧಿಕತೆ.

ನಿಲುವು ಎಂದರೆ ಮಾತಲ್ಲ,
ಮನಸ್ಸಿನ ಅಕ್ಕಸಾಲಿಗದ ಕನ್ನಡಿಕನ್ನಡಿ.
ಒಮ್ಮೆ ಹೇಳಿದ ಮಾತು
ಮತ್ತೊಮ್ಮೆಬದಲಾಗಿದ್ರೆ ಅದು ಸತ್ಯವೇ?
ಸಂಸ್ಕೃತಿ ಎನ್ನುವುದು ಮಣ್ಣು ಅಲ್ಲ,
ಅದು ನಮ್ಮ ಉಸಿರು, ನಮ್ಮ ಗುರುತು.
ಅದನ್ನು ತಳ್ಳಿ ಹಾಕುವ ಕೈಗಿಂತ,
ಗೌರವಿಸುವ ಹೃದಯವೇ ದೊಡ್ಡದು.
ಒಂದನ್ನು ನಿಂದಿಸಿ, ಇನ್ನೊಂದನ್ನು ನಮಿಸಿದರೆ,
ಅದು ಭಕ್ತಿ ಅಲ್ಲ – ಪ್ರಶ್ನೆಯ ನೆರಳು!
ನಿಲುವು ಒಂದೇ ದಾರಿಯಲ್ಲಿ ನಡೆದರೆ ಮಾತ್ರ,
ಅದು ನಿಜದ ಬೆಳಕು ಕಾಣಿಸುತ್ತದೆ.
ಸ್ವಾತಂತ್ರ್ಯ ಎಂದರೆ ಏನು?
ಇತರರ ಹೃದಯಕ್ಕೆ ನೀವು ನೀಡುವ ತೀರ್ಪೇ?

# ರಾಮನಗರ ಸುದ್ದಿ ಕಾರ್ನರ್

## ಆಕ್ಷೇಪಣೆ ಸಲ್ಲಿಸಲು ಸೂಚನೆ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ : ರಾಮನಗರ ತಾಲ್ಲೂಕಿನಲ್ಲಿ 18 ಸಹಕಾರ ಸಂಘಗಳನ್ನು ರದ್ದುಗೊಳಿಸಲಾಗಲೀ ಅಥವಾ ಪುನಃಶ್ಚೇತನಗೊಳಿಸಲಾಗಲೀ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿಯಲ್ಲಿ ಯಾವುದೇ ಪತ್ರಗಳು ದಾಖಲಾಗಿರುವುದಿಲ್ಲ. ಆದ್ದರಿಂದ ದಾಖಲೆಗಳನ್ನು ಸಲ್ಲಿಸಲು ಅಥವಾ ಪುನಃಶ್ಚೇತನಗೊಳಿಸಲು ಇಚ್ಛಿಸಿದಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, ಕಂದಾಯ ಭವನ, 1ನೇ ಮಹಡಿ, ಬೆಂ–ಮೈ ಮುಖ್ಯರಸ್ತೆ, ಬೆಂಗಳೂರು ದಕ್ಷಿಣ ಜಿಲ್ಲೆ. ಈ ಕಚೇರಿಗೆ ಸಲ್ಲಿಸಲು ಮತ್ತೊಮ್ಮೆ ತಿಳಿಸಲಾಗಿದೆ.

ವಿವರ ಇಂತಿದೆ: ಕಲ್ಪತರು ರೂರಲ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ, ರಾಮನಗರ ಟೌನ್, ಜಾಲಮಂಗಲ ರಸ್ತೆ, ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘ ನಿ., ಶ್ರೀ ಬಂಧು ಕಾರಲಿಂಗೇಶ್ವರ ಕೋಳಿ ಸಾಕಾಣಿಕೆದಾರರ ಹಾಗೂ ಮಾರಾಟಗಾರರ ಸಹಕಾರ ಸಂಘ ನಿ., ಹೊಸದೊಡ್ಡಿ, ಕೈಲಾಂಚ ಹೋಬಳಿ, ರಾಮನಗರ ಜಿಲ್ಲಾ ಹಂದಿ ಸಾಕಾಣಿಕೆದಾರರ ಸಹಕಾರ ಸಂಘ ನಿ., ರಾಮನಗರ, ಹಾಲು ಉತ್ಪಾದಕರ ಸಹಕಾರ ಸಂಘ ನಿ., ದಾಸೇಗೌಡನದೊಡ್ಡಿ, ಹಾಲು ಉತ್ಪಾದಕರ ಸಹಕಾರ ಸಂಘ ನಿ., ಬೆಣ್ಣಹಳ್ಳಿ, ಕೈಲಾಂಚ ಹೋ, ರಾಮನಗರ ಮತ್ತು ಚನ್ನದಪಟ್ಟಣ ತಾಲ್ಲೂಕು ಮಹಿಳಾ ಬೀಡಿ ಕಾರ್ಮಿಕರ ಮತ್ತು ಕೂಲಿ ಕಾರ್ಮಿಕರ ವಿವಿದೋದ್ದೇಶ ಸಹಕಾರ ಸಂಘ ನಿ., ರಾಮನಗರ ಟೌನ್, ರಾಮನಗರ ಸರ್ಕಾರಿ ನಿವೃತ್ತ ನೌಕರರ ವಿವಿದೋದ್ದೇಶ ಸಹಕಾರ ಸಂಘ ನಿ., ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿವಿದೋದ್ದೇಶ ಸಹಕಾರ ಸಂಘ ನಿ., ರಾಮನಗರ, ಡಾ. ಬಿ.ಆರ್. ಅಂಬೇಡ್ಕರ್ ವಿವಿದೋದ್ದೇಶ ಸಹಕಾರ ಸಂಘ ನಿ., ರಾಮನಗರ ಟೌನ್, ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ವಿವಿದೋದ್ದೇಶ ಸಹಕಾರ ಸಂಘ ನಿ., ಬಿಡದಿ, ಜೈಭೀಮ್ ವಿವಿದೋದ್ದೇಶ ಸಹಕಾರ ಸಂಘ ನಿ., ವಿನಾಯಕನಗರ, ರಾಮನಗರ ಟೌನ್, ಎಂ. ಗೋಪಹಳ್ಳಿ ಸಹಕಾರ ಸಂಘ ನಿ., ಬಿಡದಿ ಹೋಬಳಿ, ರೇಷ್ಮೆ ಕುಸುಬುದಾರರ ಸಹಕಾರ ಸಂಘ ನಿ., ಕನ್ನಮಂಗಲ, ಭಾಗ್ಯೋದಯ ಮಹಿಳಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಕುವೆಂಪು ನಗರ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಪತ್ತಿನ ಸಹಕಾರ ಸಂಘ ನಿ., ಟೌನ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಹಾಗೂ ಶ್ರೀ ಸೋಮೇಶ್ವರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಅರ್ಚಕರಹಳ್ಳಿ, ರಾಮನಗರ ಟೌನ್.ಈ ಸ್ಥಗಿತ ಸಹಕಾರ ಸಂಘಗಳ ಪುನಃಶ್ಚೇತನಗೊಳಿಸಲು ಇಚ್ಛಿಸಿದ್ದಲ್ಲಿ ದಾಖದಲಾತಿಗಳನ್ನು ಸಲ್ಲಿಸಬೇಕು. ತಪ್ಪಿದ್ದಲ್ಲಿ ಯಾರಿಂದಲೂ ಆಕ್ಷೇಪಣೆ ಇರುವುದಿಲ್ಲ ಎಂದು ಭಾವಿಸಿ ಸಂಘವನ್ನು ಸಮಾಪನೆಗೊಳಿಸಿ ಸಂಘದ ನೋಂದಣಿ ರದ್ದತಿಗೆ ನಿಯಮಾನುಸಾರ ಕ್ರಮವಹಿಸಲಾಗುವುದು ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿಯ ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## "ಚನ್ನಪಟ್ಟಣ್ಣ ತಾಲ್ಲೂಕಿನಲ್ಲಿ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯ ನೂತನ ಬಸ್ ತಂಗುದಾಣಗಳ ಉದ್ಘಾಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು ದಕ್ಷಿಣ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ತಗಚಗೆರೆ ಹಾಗೂ ಕೋಡಂಬಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ನಿರ್ಮಿಸಲಾಗಿರುವ ನೂತನ ಬಸ್ ತಂಗುದಾಣಗಳನ್ನು ಜನಪ್ರಿಯ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಸಿ. ಎನ್. ಮಂಜುನಾಥ್ ರವರು ಸ್ಥಳೀಯ ಎನ್‌ಡಿಎ ಮುಖಂಡರು ಹಾಗೂ ಗಣ್ಯರೊಂದಿಗೆ ಸೇರಿ ಉದ್ಘಾಟಿಸಿದರು.

ತಗಚಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಗಚಗೆರೆ ಗ್ರಾಮ, ಬ್ರಹ್ಮಣೀಪುರ ಹುಚ್ಚಯ್ಯನ ದೊಡ್ಡಿ ಗ್ರಾಮಗಳ ಮಧ್ಯೆ ಇರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಸಮೀಪ, ಯಲಚಿಪಾಳ್ಯ ಗ್ರಾಮ ಹಾಗೂ ಕೋಡಂಬಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಂಡಾಪುರ ಗ್ರಾಮಗಳಲ್ಲಿ ನಿರ್ಮಿಸಲಾಗಿರುವ ಬಸ್ ತಂಗುದಾಣಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನರಿಗೆ ಮೂಲಸೌಕರ್ಯ ಅಭಿವೃದ್ಧಿಯ ಸೌಲಭ್ಯಗಳನ್ನು ಒದಗಿಸುವುದು ಕೇಂದ್ರ ಸರ್ಕಾರದ ಹಾಗೂ ತಮ್ಮ ಪ್ರಮುಖ



ಆದ್ಯತೆಯಾಗಿದೆ ಎಂದು ತಿಳಿಸಿದರು.

"ಗ್ರಾಮೀಣ ಪ್ರದೇಶಗಳ ಜನರಿಗೆ ಸುಗಮ ಮತ್ತು ಸುರಕ್ಷಿತ ಸಂಚಾರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ಬಸ್ ತಂಗುದಾಣಗಳನ್ನು ನಿರ್ಮಿಸಲಾಗಿದೆ. ವಿದ್ಯಾರ್ಥಿಗಳು, ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರು ಮಳೆ, ಬಿಸಿಲಿನಿಂದ ರಕ್ಷಣೆ ಪಡೆದು ಅನುಕೂಲಕರವಾಗಿ ಪ್ರಯಾಣ ಮಾಡಲು ಈ ತಂಗುದಾಣಗಳು ಸಹಕಾರಿಯಾಗಲಿವೆ. ಅಭಿವೃದ್ಧಿಯ ಫಲ ಪ್ರತಿಯೊಬ್ಬ ನಾಗರಿಕನಿಗೂ ತಲುಪಬೇಕು ಎಂಬ ಸಂಕಲ್ಪದೊಂದಿಗೆ ಜನಪರ ಯೋಜನೆಗಳನ್ನು ನಿರಂತರವಾಗಿ ಜಾರಿಗೊಳಿಸಲಾಗುತ್ತಿದೆ" ಎಂದು ಸಂಸದ ಡಾ. ಸಿ. ಎನ್. ಮಂಜುನಾಥ್ ರವರು ಹೇಳಿದರು.

ಈ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಜೆಡಿಎಸ್ ಅಧ್ಯಕ್ಷರಾದ ಶ್ರೀ ಜಯಮುತ್ತುರವರು, ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಶ್ರೀ ಆನಂದ್ ಸ್ವಾಮಿರವರು, ಚನ್ನಪಟ್ಟಣ ಜೆಡಿಎಸ್ ಅಧ್ಯಕ್ಷರಾದ ಶ್ರೀ ನಾಗರಾಜುರವರು, ಬಿಜೆಪಿ ತಾಲ್ಲೂಕು ಅಧ್ಯಕ್ಷರಾದ ಶ್ರೀ ಚೇತನ್ ರವರು, ಸ್ಥಳೀಯ ಎನ್‌ಡಿಎ ಮುಖಂಡರು, ಜನಪ್ರತಿನಿಧಿಗಳು, ಕಾರ್ಯಕರ್ತರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು.

ರಾಮನಗರ ಜಿಲ್ಲೆಯ ಎಲ್ಲಾ ತಾಲ್ಲೂಕು ಹಾಗೂ ವಿಶೇಷ ಸುದ್ದಿಗಾಗಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಬಿಡದಿ ಮಹೇಶ್ : ವರದಿಗಾರರರು 99728 34055

## ಆದಾಯ ಗಳಿಕೆಗೆ ಡಿಜಿಟಲ್ ಮಾಧ್ಯಮ ಬಳಸಿ : ಗಿರೀಶ್ ಕನಕಪುರ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಯೂಟ್ಯೂಬ್ ಒಂದು ನಾವೆಲ್ಲ ದಿನನಿತ್ಯ ಬಳಸುವ ಟೂಲ್. ಪ್ರಪಂಚದಾದ್ಯಂತ 2ನೇ ಸರ್ಚ್ ಇಂಜಿನ್ ಆಗಿ ಕೆಲಸ ಮಾಡ್ತಾ ಇದೆ. ಯೂಟ್ಯೂಬ್ ನಿಂದ ನಾವು ಆದಾಯವನ್ನು ಗಳಿಸಬಹುದು ಎಂದು ರಾಮ್ ಜಿ ಪ್ರೊಡಕ್ಷನ್ ಕ್ರಿಯೇಟೀವ್ ಹೆಡ್ ಗಿರೀಶ್ ಕನಕಪುರ ಅಭಿಪ್ರಾಯಪಟ್ಟರು

ತುಮಕೂರು ನಗರದ ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದಲ್ಲಿ ರೇಡಿಯೋ ಸಿದ್ಧಾರ್ಥ 90.8 ಎಫ್. ಎಂ, ಪ್ರಿಂಟ್ ಮೀಡಿಯ ಮತ್ತು ಸೋಶಿಯಲ್ ಮೀಡಿಯಾ ಪತ್ರಕರ್ತರ ಸಂಘ (ರಿ), ತುಮಕೂರು ಇವರ ವತಿಯಿಂದ ಮಾಧ್ಯಮಗಳ ಸವಾಲು ಮತ್ತು ಬರವಣಿಗೆ ಕುರಿತು ಎರಡು ದಿನಗಳ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಯೂಟ್ಯೂಬ್ ನ ಉದ್ಯಮವಾಗಿ ನೋಡಿದಾಗ, 2005 ರಲ್ಲಿ ಯೂಟ್ಯೂಬ್ ಸ್ಥಾಪನೆಯಾಯಿತು. 2006 ರಲ್ಲಿ ಗೂಗಲ್ ಸ್ವಾಧೀನಕ್ಕೆ ಯೂಟ್ಯೂಬ್ ಬರುತ್ತೇ ನಂತರ




2007ರಲ್ಲಿ ಪಾರ್ಟ್ನರ್ಸ್ ಪ್ರೋಗ್ರಾಂ, 2015 ರಿಂದ ಮೊಬೈಲ್ ಕ್ರಾಂತಿ ಆಗುತ್ತೇ, ಯೂಟ್ಯೂಬ್ ಇವತ್ತು ಹೆಚ್ಚು ರೆವಿನ್ಯೂ ಆಗಿ ಸಂಪಾದಿಸುವ ಸಂಸ್ಥೆಯಾಗಿದೆ. ಯಾವುದೇ ಬಂಡವಾಳ ಹಾಕದೆ, ಆದಾಯ ತೆಗೆಯುವ ಏಕೈಕ ವೇದಿಕೆ ಯೂಟ್ಯೂಬ್ ಎಂದರು

ಪ್ರೇಮ್ ಸಾಗರ್ ವಿ ಮಾತನಾಡಿ ದಿನನಿತ್ಯದ ಬಳಕೆಯಲ್ಲಿ ಸೋಶಿಯಲ್ ಮೀಡಿಯಾ ಬಳಕೆ ಹೆಚ್ಚಾಗಿದೆ. ಹಾಗೂ ಅತಿ ಹೆಚ್ಚಾಗಿ ಜನರೊಂದಿಗೆ ಬೆರೆಯಲು ಸೋಶಿಯಲ್ ಮೀಡಿಯಾದ ಮೂಲಕ ಸಂಪರ್ಕ ಬೆಳೆಸಬಹುದು. ಇತ್ತೀಚೆಗೆ ಸೋಶಿಯಲ್ ಮೀಡಿಯಾ ತುಂಬಾ ದೊಡ್ಡ ಇಂಪ್ಯಾಕ್ಟ್ ಆಗಿ ಬದಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ನಾವು ತುಂಬ ಎಂಗೇಜ್ ಆಗಿರಬೇಕು ಎಂದರು

ಕಾರ್ಯಕ್ರಮದಲ್ಲಿ ಪ್ರಿಂಟ್ ಮೀಡಿಯ ಮತ್ತು ಸೋಶಿಯಲ್ ಮೀಡಿಯಾ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಸಿ.ಡಿ.ಕೃಷ್ಣಮೂರ್ತಿ, ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಬಿ.ಟಿ ಮುದ್ದೇಶ್, ಸಹಾಯಕ ಪ್ರಾಧ್ಯಾಪಕರಾದ ಡಾ.ಜ್ಯೋತಿ, ನವೀನ್ ಎನ್.ಜಿ. ರೇಡಿಯೋ ವಿಭಾಗದ ಗೌತಮ್, ಹರೀಶ್ ಸೇರಿದಂತೆ ಪ್ರಿಂಟ್ ಮೀಡಿಯ ಮತ್ತು ಸೋಶಿಯಲ್ ಮೀಡಿಯಾ ಪತ್ರಕರ್ತರ ಸಂಘದ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳು ಇತರರು ಉಪಸ್ಥಿತರಿದ್ದರು

## ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಮುನ್ನವರ್ ಪಾಷ

ಸೂರ್ಯಪ್ರಗತಿನ್ಯೂಸ್.ಕಾಂ

ವರದಿ; ಎ.ಎನ್.ಪೀರ್ ಸಾಬ್

ತುಮಕೂರು :ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ತಮ್ಮದೇ ಆದ ಛಾಪು ಮೂಡಿಸಿಕೊಂಡಿದ್ದ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಮುನಾವರ್ ಪಾಷರವರು ಸೇವೆಯಿಂದ ನಿವೃತ್ತರಾದ ಪ್ರಯುಕ್ತ ಅವರನ್ನು ಸೋಮವಾರ ರಾತ್ರಿ ತುಮಕೂರಿನ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ನೂರಾರು ಮಂದಿ ಅದ್ದೂರಿಯಿಂದ ಸನ್ಮಾನಿಸಿದರು. ಪೋಲೀಸ್ ಇಲಾಖೆಯಲ್ಲಿ 33ವರ್ಷಗಳ ಕಾಲಹಂತ ಹಂತವಾಗಿ ಬಡ್ತಿ ಪಡೆದು ಗುಪ್ತ ದಳ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಾ ನಿವೃತ್ತರಾದರು. ಮುನಾವರ್ ಪಾಷರವರು ಪೋಲೀಸ್‌ಇಲಾಖೆಯಲ್ಲಿ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಜಿಲ್ಲೆಯಲ್ಲಿ ಹೆಸರು ವಾಸಿಯಾಗಿದ್ದರು . ಇವರು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಾ ಕಬಡ್ಡಿ ಕ್ರೀಡೆಯಲ್ಲೂ ಹೆಸರು ಮಾಡಿದ್ದರು. ಅಪಾರ ಜನತೆಯ ಪ್ರೀತಿ ವಿಶ್ವಾಸ ಗಳಿಸಿದ್ದ ಮುನ್ನಾರವರನ್ನು ಸ್ನೇಹ ಬಳಗದ ಪರವಾಗಿ ವಿವಿಧ ಸಂಘ




ಸಂಸ್ಥೆಗಳವರು ಕ್ರೀಡಾಭಿಮಾನಿಗಳು ಪೋಲೀಸ್ ಅಧಿಕಾರಿಗಳು ಕ್ರೀಡಾಪಟುಗಳು ಸೇರಿದಂತೆ ನೂರಾರು ಮಂದಿ ಮುನಾವರ್ ಪಾಷ ದಂಪತಿಗಳನ್ನು ಅದ್ದೂರಿಯಾಗಿ ಸನ್ಮಾನಿಸಿ ಪುಷ್ಪವೃಷ್ಟಿಯನ್ನೆ ಸುರಿಸಿ ತಮ್ಮ ಅಭಿಮಾನವನ್ನು ಪ್ರದರ್ಶಿಸಿದರು. ಇದೇ ವೇಳೆ ಮುನಾವರ್ ಪಾಷರವರು ತಮಗೆ ತೋರಿಸಿದ ಪ್ರೀತಿ ವಿಶ್ವಾಸಕ್ಕೆ ಧನ್ಯವಾದ ಅರ್ಪಿಸಿದರು ಆನಂತರ ಅಭಿಮಾನಿಗಳ ಒತ್ತಾಯದ ಮೇರೆಗೆ ಕನ್ನಡ ಚಲನಚಿತ್ರ ಗೀತೆ ಯನ್ನು ಹಾಡಿ ಎಲ್ಲರನ್ನು ರಂಜಿಸಿದರು. ತಾವು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ನಡೆದ ಘಟನಾವಳಿಗಳನ್ನುಮೆಲುಕು ಹಾಕಿದರು.

ಬೈಟ್ ತುಮಕೂರು ನಗರ ಡಿವೈಎಸ್ಪಿ ಚಂದ್ರಶೇಖರ್ ಪೋಲೀಸ್ ಅಧಿಕಾರಿಗಳಾದ ರಾಘವೇಂದ್ರ ಅವಿನಾಶ್ ಗುಪ್ತದಳ ವಿಭಾಗದ ಡಿವೈಎಸ್ಪಿ ಶ್ರೀ ಧರ್ ಜಿಲ್ಲಾ ಸರ್ಕಾರಿ ನೌಕರರ ಸಂಘದ ಮುಖಂಡ ನರಸಿಂಹರಾಜು ಕಾಂಗ್ರೆಸ್ ಮುಖಂಡ ಇಕ್ಬಾಲ್ ಅಹಮದ್ ಮಾಜಿ ಪಾಲಿಕೆ ಸದಸ್ಯ ಶ್ರೀ ನಿವಾಸ್ ದಲಿತ ಮುಖಂಡ ಪಿ.ಎನ್.ರಾಮಯ್ಯ ಸೇರಿದಂತೆ ಹಲವಾರು ಮುಖಂಡರುಗಳು ಪಾಲ್ಗೊಂಡು ಮುನಾವರ್ ಸರಳತೆ ಶಿಸ್ತು ಧೈರ್ಯ ಹಾಗೂ ಕಾರ್ಯ ನಿರ್ವಹಣೆ ಬಗ್ಗೆ ಗುಣಗಾನ ಮಾಡಿದರು.ಅಮೋಘ ಟಿವಿ ಸಂಪಾದಕ ರಾಕ್ ಲೈನ್ ರವಿಕುಮಾರ್ ಸೇರಿದಂತೆ ಅವರ ಸ್ನೇಹಿತರ ಬಳಗ ಈ ಕಾರ್ಯಕ್ರಮ ವನ್ನುಆಯೋಜಿಸಿದ್ದರು ಈ ಕಾರ್ಯಕ್ರಮ ಕ್ಕೆ ಮುಂಚೆ ಮುನಾವರ್ ಪಾಷ ದಂಪತಿಗಳನ್ನು ಅಭಿಮಾನಿಗಳು ಮೆರವಣಿಗೆ ನಡೆಸಿ ವೇದಿಕೆಗೆ ಕರೆದುಕೊಂಡು ಬಂದಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

## ಎಸ್ಸಿ ಎಸ್ಟಿ ಮೀಸಲಾತಿ ಕಡಿತ ಬೃಹತ್ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ



ಕೊಳ್ಳೇಗಾಲ ತಾಲ್ಲೂಕು ನಾಯಕರ ಸಂಘ ಮತ್ತು ನಾಯಕ ಜನಾಂಗದ ಗಡಿಮನೆ, ಕಟ್ಟೆ ಮನೆ ಮತ್ತು ಕಸಬಾ ಮನೆಯ ಯಜಮಾನರು ಮತ್ತು ಕುಲಸ್ಥರ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯನ್ನು ಕಡಿತಗೊಳಿಸಿರುವುದನ್ನು ಖಂಡಿಸಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ದೊಡ್ಡ ನಾಯಕರ ಬೀದಿಯಿಂದ ಹೊರಟ ಪ್ರತಿಭಟನೆ ಚಿಕ್ಕ ನಾಯಕರ ಬೀದಿ, ಡಾ.ಅಂಬೇಡ್ಕರ್ ರಸ್ತೆ ಮೂಲಕ ತಾಲ್ಲೂಕು ಕಚೇರಿಗೆ ತೆರಳಿ ಪ್ರತಿಭಟಿಸಿ, ಶಿರೆಸ್ತದಾರ್ ಕೃಪಕಾರ್ ರವರಿಗೆ ಮನವಿ ಸಲ್ಲಿಸಿದರು. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸುವಂತೆ ಹಲವು ದಶಕಗಳಿಂದ ಹೋರಾಟ ನಡೆಯುತ್ತಿದ್ದು, ವಿವಿಧ ಆಯೋಗಗಳ ಶಿಫಾರಸ್ಸಿನ ಮೇರೆಗೆ ರಾಜ್ಯ ಸರ್ಕಾರ 2022ರಲ್ಲಿ ಮೀಸಲಾತಿ ಪ್ರಮಾಣವನ್ನು ಎಸ್‌ಸಿಗೆ 15ರಿಂದ 17 ಶೇಕಡಾ ಹಾಗೂ ಎಸ್‌ಟಿಗೆ 3ರಿಂದ 7 ಶೇಕಡಾಗೆ ಹೆಚ್ಚಿಸುವ ಕಾಯ್ದೆ ಜಾರಿಗೊಳಿಸಿತ್ತು. ಆದರೆ ಈ ಕಾಯ್ದೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಜಾರಿಯಾಗಿರುವುದು ಸಾಮಾಜಿಕ ನ್ಯಾಯಕ್ಕೆ ಹಿನ್ನಡೆಯಾಗಿದೆ ಎಂದು ಆರೋಪಿಸಿದರು. ಕಾಯ್ದೆಯನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸುವ ಮೂಲಕ ಕಾನೂನಿಗೆ ಸಂವಿಧಾನಾತ್ಮಕ ರಕ್ಷಣೆ ನೀಡಬೇಕು. ಈ ಕುರಿತು ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಬೇಕು. ಅಗತ್ಯವಿದ್ದಲ್ಲಿ ಸರ್ವಪಕ್ಷ ಸಭೆ ಕರೆದು ಸಂಸದರು, ಶಾಸಕರು ಹಾಗೂ ಸಚಿವರ ನಿಯೋಗವನ್ನು ಪ್ರಧಾನಮಂತ್ರಿಗಳ ಭೇಟಿಗೆ ಕರೆದೊಯ್ಯಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣಪತ್ರ ಪಡೆದು ಸೌಲಭ್ಯ ಪಡೆಯುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಅಂತಹ ಪ್ರಮಾಣಪತ್ರಗಳನ್ನು ನೀಡುವ ಅಧಿಕಾರಿಗಳ ಮೇಲೂ ಕಾನೂನು ಕ್ರಮ ಜರುಗಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಯಿತು.

ಈ ಪ್ರತಿಭಟನೆಯಲ್ಲಿ ನಾಯಕ ಜನಾಂಗದ ಗಡಿ ಮನೆ ಯಜಮಾನರು ಪ್ರಸಾದ್, ಮೂರ್ತಿ, ವೆಂಕಟಾಚಲ, ಗವಿರಾಯ ನಾಯಕ, ಪಾಳ್ಯ ಕಟ್ಟೆ ಮನೆ ದೊಡ್ಡ ಸೀಗನಾಯಕ, ಶಿವಪ್ರಸಾದ್ ನಾಯಕ, ದುಂಡು ಮಾದ ನಾಯಕ, ವಿಶ್ವಮೂರ್ತಿ ನಾಯಕ, ಸೀಗನಾಯಕ ಕಸಬಾ ಯಜಮಾನರು ಚಿಕ್ಕಮಾದನಾಯಕ, ಸುರೇಂದ್ರ, ಮಹದೇವ, ನಾಗರಾಜು, ವೆಂಕಟರಮಣ, ಗೋವಿಂದರಾಜು, ಈಶ್ವರ್, ಸುಂದರ್ ನಾಯಕ, ಕೊಪ್ಪಾಳಿ ಮಹದೇವ ನಾಯಕ, ಶಂಕರ್

ತಾಲ್ಲೂಕು ನಾಯಕ ಸಂಘದ ಅಧ್ಯಕ್ಷ ಜಗದೀಶ್ ನಾಯಕ, ಉಪಾಧ್ಯಕ್ಷ ಮಹದೇವ ನಾಯಕ, ನಿರ್ದೇಶಕರು ಕುನ್ನನಾಯಕ, ನಿಂಗನಾಯಕ, ಮುಡಿಗುಂಡ ನಟರಾಜು, ಪಾಳ್ಯ ಕೃಷ್ಣ, ಪಾಳ್ಯ ಜಯಸುಂದರ ಸೇರಿದಂತೆ ಅನೇಕರು ಹಾಜರಿದ್ದರು.

## ವಿದ್ಯಾರ್ಥಿಗಳಿಗೆ ಉಚಿತ ಕಲಿಕಾ ಸಾಮಗ್ರಿಗಳ ವಿತರಣೆ

ಸೂರ್ಯಪ್ರಗತಿನ್ಯೂಸ್.ಕಾಂ




ಹಲಗೂರು, : ಸಮೀಪದ ದಳವಾಯಿ ಕೋಡಿಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಿದ್ದು

ಈ ಸಂದರ್ಭದಲ್ಲಿ ಗಿರೀಶ್ ಅವರ ತಂದೆ–ತಾಯಿಯವರ ಸ್ಮರಣಾರ್ಥ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಸೇರಿದಂತೆ ವಿವಿಧ ಕಲಿಕಾ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಯಿತು. ಸರ್ಕಾರಿ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ದಾಖಲಿಸುವ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ಅಗತ್ಯವಿದೆ ಈ ಶಾಲೆಗೆ ಸುಮಾರು ವರ್ಷಗಳ ಹಿಂದೆ ನಮ್ಮ ತಂದೆಯವರು ಐದು ಗುಂಟೆ ಜಮೀನಿ ನೀಡಿದ್ದು ಅವರ ನಡೆಸುತ್ತಿದ್ದ ಕಾರ್ಯಕ್ರಮವನ್ನು ನಾನು ನಡೆಸುತ್ತಿದ್ದೇನೆ ಎಂದು ಗಿರೀಶ್ ತಿಳಿಸಿದರು.

ಅಂತರ ದಾನಿಗಳನ್ನು ಶಾಲೆಯ ಸಿಬ್ಬಂದಿ ಸನ್ಮಾನಿಸಿದರು.ಈ ಸಂದರ್ಭದಲ್ಲಿ ಸಿಆರ್‌ಪಿ ತಿಮ್ಮಯ್ಯ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ನಾಗೇಶ್, ಪ್ರಭಾರ ಮುಖ್ಯ ಶಿಕ್ಷಕಿ ನವ್ಯಶ್ರೀ, ಸಹ ಶಿಕ್ಷಕರಾದ ಗೌರಮ್ಮ, ಶಿಲ್ಪಾ, ಕಾವ್ಯ, ಸುಮಾ, ಯೋಗೇಶ್ ಹಾಗೂ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

## ಹಸು/ಎಮ್ಮೆ ಸಾಕಾಣಿಕೆ : ಸಹಾಯಧನ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ತುಮಕೂರ: ಪಶುಪಾಲನಾ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಯು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ತಿಪಟೂರು ಹಾಗೂ ಗುಬ್ಬಿ ತಾಲ್ಲೂಕಿನ ಗಣಿಬಾಧಿತ ಗ್ರಾಮದ ಫಲಾನುಭವಿಗಳಿಗೆ ಒಂದು ಮಿಶ್ರತಳಿ ಹಾಲು ಕರೆಯುವ ಹಸು/ಎಮ್ಮೆ ಸಾಕಾಣಿಕೆಗಾಗಿ ಸಹಾಯಧನ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಿದೆ. ಗಣಿಬಾಧಿತ/ಪ್ರಭಾವಕ್ಕೊಳಗಾದ ಚಿಕ್ಕನಾಯಕನಹಳ್ಳಿ, ತಿಪಟೂರು ಹಾಗೂ ಗುಬ್ಬಿ ತಾಲ್ಲೂಕಿನ 5ಕಿಮೀ. ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಫಲಾನುಭವಿಗಳು ಸಹಾಯಧನ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಅರ್ಹರಿಗೆ ಬ್ಯಾಂಕಿನ ಮೂಲಕ ಘಟಕ ವೆಚ್ಚ 60,000 ರೂ.ಗಳ ಸಹಾಯಧನವನ್ನು ನೀಡಲಾಗುವುದು. ಘಟಕ ವೆಚ್ಚದ ಪೈಕಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90ರಂತೆ ಮತ್ತು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ.50ರಂತೆ ನೀಡಲಾಗುವುದು. ನಿಯಮಾನುಸಾರ ಅಂಗವಿಕಲರಿಗೆ, ಅಲ್ಪಸಂಖ್ಯಾತರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಸಂಬಂಧಪಟ್ಟ ಗಣಿಬಾಧಿತ ಪ್ರದೇಶದ ವ್ಯಾಪ್ತಿಗೆ ಬರುವ ಪಶುವೈದ್ಯ ಸಂಸ್ಥೆಯವರನ್ನು ಸಂಪರ್ಕಿಸಬಹುದಾಗಿದೆ.

ಭರ್ತಿ ಮಾಡಿದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಜೂನ್ 13ರೊಳಗಾಗಿ ಸಲ್ಲಿಸಬಹುದಾಗಿದ್ದು, ಅರ್ಜಿಯೊಂದಿಗೆ ಆಧಾರ್ ಕಾರ್ಡ್, ಕುಟುಂಬ ಪಡಿತರ ಚೀಟಿಯ ಪ್ರತಿ, ಜಾತಿ ಪ್ರಮಾಣ ಪತ್ರ(ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಅಲ್ಪಸಂಖ್ಯಾತರಾಗಿದ್ದಲ್ಲಿ), ಗ್ರಾಮ ಪಂಚಾಯಿತಿಯಿಂದ ನೀಡಿದ ವಾಸಸ್ಥಳದ ದೃಢೀಕರಣ ಪತ್ರ, ಬ್ಯಾಂಕ್ ಉಳಿತಾಯ ಖಾತೆಯ ಪಾಸ್ ಪುಸ್ತಕದ ದೃಢೀಕೃತ ಪ್ರತಿ, ವಿಕಲಚೇತನರಾಗಿದ್ದಲ್ಲಿ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಬೇಕು. ಅರ್ಜಿದಾರರು ಕಡ್ಡಾಯವಾಗಿ ಗಣಿಬಾಧಿತ/ಪ್ರಭಾವಕ್ಕೊಳಗಾದ 5 ಕಿಮೀ. ವ್ಯಾಪ್ತಿಯಲ್ಲಿರುವ ಗ್ರಾಮದವರಾಗಿರಬೇಕು ಹಾಗೂ GPLF ಘಟಕದ ಸದಸ್ಯರಾಗಿರಬೇಕು, NRLM ನಲ್ಲಿ ಕಡ್ಡಾಯವಾಗಿ ನೋಂದಾಯಿಸಿರಬೇಕು ಎಂದು ಪ್ರಕಟಣೆ ತಿಳಿಸಿದೆ.

### ಜಿಲ್ಲಾ ಸೈನಿಕ ಮಂಡಳಿ ಪುನರ್ ರಚಿಸಲು ಅರ್ಜಿ ಆಹ್ವಾನ

ತುಮಕೂರು: ಮಾಜಿ ಸೈನಿಕರ ಕಲ್ಯಾಣ ಯೋಜನೆಗಳಿಗೆ ಪೂರಕವಾಗಿ ಜಿಲ್ಲಾ ಸೈನಿಕ ಮಂಡಳಿಯನ್ನು ಪುನರ್ ರಚಿಸಲಾಗುತ್ತಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ ಮತ್ತು ರಾಮನಗರ ಜಿಲ್ಲೆಗಳ ವ್ಯಾಪ್ತಿಯ ಮಾಜಿ ಸೈನಿಕರು ಜಿಲ್ಲಾ ಸೈನಿಕ ಮಂಡಳಿಯಲ್ಲಿ ವೇತನ–ಭತ್ಯೆ ರಹಿತವಾಗಿ ಸ್ವ ಇಚ್ಛೆಯಿಂದ ಕಾರ್ಯ ನಿರ್ವಹಿಸಲು ಆಸಕ್ತಿಯುಳ್ಳವರು ಅರ್ಜಿ ಸಲ್ಲಿಸಬಹುದಾಗಿದೆ.

ಸ್ವವಿವರಗಳುಳ್ಳ ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಜೂನ್ 10ರೊಳಗಾಗಿ ಉಪನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಗ್ರಾಮಾಂತರ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಭವನ, #58, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ರಸ್ತೆ, ಬೆಂಗಳೂರು–560025 ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ವಾ.ಸಂ. 080–25588718ನ್ನು ಸಂಪರ್ಕಿಸಬೇಕೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು

## ಹೇಮಾವತಿ ಮುಖ್ಯ ನಾಲೆಯಲ್ಲಿ ಈ ವರ್ಷದಲ್ಲೇ ನವಿಲೆ ಭಾಗಕ್ಕೆ ನೀರು ಹರಿಸಲಾಗುವುದು – ಶಾಸಕ ಸಿ.ಬಿ.ಸುರೇಶ್‌ಬಾಬು

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ:–ಹೇಮಾವತಿಯ ತುಮಕೂರು ನಾಲೆಯಲ್ಲಿ ನೀರು ಹರಿಸುವ ವೇಳೆಗೆ ನವಿಲೇ ಭಾಗದ ನಾಲಾ ಕಾಮಗಾರಿಯನ್ನು ಪೂರ್ಣಗೊಳಿಸಿ ನೀರನ್ನು ಹರಿಸಲಾಗುವುದು ಈ ಬಗ್ಗೆ ರೈತರು ಹಾಗೂ ಹೇಮಾವತಿ ಹೋರಾಟಗಾರರು ಆತಂಕ ಪಡುವ ಅಗತ್ಯವಿಲ್ಲ ವೆಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ತಾಲ್ಲೂಕಿನ ಹೇಮಾವತಿ ನಾಲಾ ಕಾಮಗಾರಿ ಸ್ಥಳಕ್ಕೆ ಮಂಗಳವಾರ ಬೇಡಿ ನೀಡಿ ಕಾಮಗಾರಿಯನ್ನು ಪ್ರಗತಿಯನ್ನು ಪರೀಶಿಲಿಸಿ ಮಾತನಾಡಿದ ಅವರು ಈಗಾಗಲೇ ಬಹುತೇಕ ನಾಲಾ ಕಾಮಗಾರಿಯು ನಡೆಯುತ್ತಿದ್ದು ಇನ್ನು 70ಮೀಟರ್ ಉದ್ದ ಎರಡು ಸೇತುವೆಗಳ ನಿರ್ಮಾಣವಾಗಬೇಕಿದೆ ಈ ತಿಂಗಳ ಅಂತ್ಯಕ್ಕೆ ಅವುಗಳು ಪೂರ್ಣಗೊಳ್ಳಲಿದ್ದು ನಂತರ ಚಿಕ್ಕಪುಟ್ಟ ಕೆಲಸಗಳನ್ನು ಮಾಡಲಾಗುವುದು ಇನ್ನು ಈ ನೀರು ಹರಿಯುವ ವೇಳೆಗೆ ಕಂದಿಕೆರೆ ಭಾಗಕ್ಕೂ ಅಗತ್ಯವಿರುವಂತಹ ಕೆಲಸ ವನ್ನು ಮಾಡುವ ಮೂಲಕ ಚಿಕ್ಕನಾಯಕನಹಳ್ಳಿ, ನಾಗತಿಕೆರೆ, ಕಂದಿಕೆರೆ ಮೂಲಕ ಬೋರನಕಣಿವೆಗೆ ಹರಿಸಲು ಕ್ರಮಕೈಗೊಳ್ಳಲಾಗುವುದು ಈ ಕಾಮಗಾರಿಯನ್ನು ಪ್ರತಿ ವಾರ ಅಧಿಕಾರಿಗಳೊಂದಿಗೆ ಸಭೆನಡೆಸುವುದು ಸೇರಿದಂತೆ ಸ್ಥಳಕ್ಕೆ ಬೇಟಿ ನೀಡಿ ಯಾವುದಾದರು ಸಮಸ್ಯೆ ಇದ್ದರೆ ಅದನ್ನು ಬಗೆಹರಿಸುವ ಮೂಲಕ ಈ ಕಾಮಗಾರಿಯನ್ನು ಪರೀಶಿಲಿಸಲಾಗುತ್ತಿದೆ



ಅದ್ದರಿಂದ ರೈತರು ಸಹಕಾರ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಹೇಮಾವತಿ ನಾಲಾವಲಯದ ಇಂಜಿನಿಯರ್ ಪ್ರಭಾಕರ್ ಮಾತನಾಡಿ ಚಿಕ್ಕನಾಯಕನಹಳ್ಳಿ ಹೇಮಾವತಿ ಬ್ರಾಂಚ್ ಕೆನಾಲ್ ಕಾಮಗಾರಿಗೆ ಸಂಬಂಧಿಸಿದಂತೆ ಕಳೆದ ಡಿಸೆಂಬರ್‌ನಿಂದ ಅವಾಲ್ಲಾ ಮಾಡಿ ರೈತರಿಗೆ ಪರಿಹಾರದಹಣವನ್ನು ನೀಡುವ ಮೂಲಕ ಕಾಮಗಾರಿಯನ್ನು ಮಾಡಲಾಗುತ್ತಿದೆ ದಬ್ಬೇಘಟ್ಟ ಸೇರಿದಂತೆ ಇತರೆ ಭಾಗದಲ್ಲಿದ್ದಂತಹ ಭೂಸ್ವಾದೀನ ಪ್ರಕ್ರಿಯೇಯನ್ನು ಬಗೆಹರಿಸಿ ಶಾಸಕರು ಮುಂದಾಳತ್ವದಲ್ಲಿ ರೈತರಿಗೆ ಪರಿಹಾರದ ಹಣವನ್ನು ನೀಡಲಾಗುತ್ತಿದೆ ಇನ್ನು ಸೇತುವೆಗಳನ್ನು ನಿರ್ಮಿಸುವ ಜಾಗದಲ್ಲಿ ಸ್ವಲ್ಪ ಮಟ್ಟಿಗೆ ಬಿಗಿಯಾದ ಬಂಡೆ ರೀತಿಯ ಮಣ್ಣು ಸಿಕ್ಕಿದ್ದರಿಂದ ಕಾಮಗಾರಿ ತಡವಾಗುತ್ತಿದೆ ಅದನ್ನು ಹೊರತು ಪಡಿಸಿದರೆ ಇನ್ನು ಎರಡು ಸೇತುವೆಗಳ ನಿರ್ಮಾಣ ನಡೆಯುತ್ತಿದ್ದು ಇನ್ನು ಈ ತಿಂಗಳಲ್ಲಿ ಅದನ್ನು ಮುಗಿಸುತ್ತೇವೆ ಇನ್ನು 9.6ಕಿ.ಮೀಯಿಂದ ಇದನ್ನು ಭಾಗಮಾಡುವ ಮೂಲಕ ದಬ್ಬೇಘಟ್ಟದಿಂದ ನೈಸರ್ಗಿಕವಾಗಿ ಗುರುತ್ವಾಕರ್ಷಣೆಯ ಮೂಲಕ ನೀರನ್ನು ಹರಿಸಲಾಗುವುದು ಇದರ ಜೊತೆಯಲ್ಲಿ ಮುಖ್ಯ ನಾಲೆಯಲ್ಲಿರುವ ಸೇತುವೆಗಳಲ್ಲಿರುವ ಹೂಳನ್ನು ತೆಗೆಯಲು ಟೆಂಡರ್ ಕರೆಯಲಾಗಿದ್ದು ಅದನ್ನು ನೀರುಹರಿಸುವ ವೇಳೆಗೆ ತೆಗೆಯಲಾಗುವುದು ಎಂದ ಅವರು ಜುಲೈ ಆಗಸ್ಟ್ ಹೇಮಾವತಿ ನೀರು ಹರಿಸುವ ವೇಳೆಗೆ ಎಲ್ಲಾ ಕೆಲಸಗಳನ್ನು ಮುಗಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಹೇಮಾವತಿ ಇಂಜಿನಿಯರ್ ಸೌಜನ್ಯ ಸೇರಿದಂತೆ ಗುತ್ತಿದಾರರು ಹಾಜರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಪ್ರಸಕ್ತ ವರ್ಷದಿಂದ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಪ್ರಾರಂಭ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ.. ಐಡಿ ಹಳ್ಳಿಯಲ್ಲಿ ಪ್ರಸಕ್ತ ವರ್ಷದಿಂದ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಪ್ರಾರಂಭಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಾದವರೆಡ್ಡಿ ತಿಳಿಸಿದ್ದಾರೆ ಐಡಿ ಹಳ್ಳಿಯಲ್ಲಿ ಕೆಪಿಎಸ್ ಶಾಲೆಗೆ ಚಾಲನೆ ನೀಡಿ ಮಾತನಾಡಿ ಶಾಸಕರಾದ ಕೆ ಎನ್ ರಾಜಣ್ಣ ರವರ ಆಶಯದಂತೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಕೆಪಿಎಸ್ ಶಾಲೆಯ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಹನುಮಂತರಾಯಪ್ಪ ಶಾಲಾ ದಾಖಲಾತಿ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿ ತಾಲೂಕಿನಲ್ಲಿ ಚಿಕ್ಕದಾಳವಟ್ಟ ಐಡಿ ಹಳ್ಳಿ ಬ್ಯಾಲ್ಯಾ ಗ್ರಾಮಗಳಲ್ಲಿ ಕೆಪಿಎಸ್ ಶಾಲೆ ಪ್ರಾರಂಭಿಸಲಾಗಿದೆ ಸರ್ಕಾರದ ನಿರ್ದೇಶನದಂತೆ ಶಾಲೆಗಳು ಇಂದು ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಸಮವಸ್ತ್ರ ನೋಟ್ ಬುಕ್ ಬಿಸಿ ಊಟ ಇಂದು ಪ್ರಾರಂಭಿಸಲಾಗಿದೆ ಶಾಲೆ ಪ್ರಾರಂಭದ ಹಿನ್ನೆಲೆಯಲ್ಲಿ ಶಾಲಾವರಣ ಸ್ವಚ್ಛಗೊಳಿಸಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು ಮಕ್ಕಳಲ್ಲಿ ಹಬ್ಬದ ವಾತಾವರಣ ಕಂಡು ಬಂದಿದೆ ಎಂದರು ಈ ಸಂದರ್ಭದಲ್ಲಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಚಿತ್ತಯ್ಯ ಬಿ ಆರ್ ಸಿ ಪವನ್ ಕುಮಾರ್ ರೆಡ್ಡಿ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಬಿಕೆ ಉತ್ತಮ್ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಂಜನೇಯಲು ಇಸಿಓ ಶ್ರೀನಿವಾಸ ಮೂರ್ತಿ ಅನಂತರಾಮು ದಾಸಣ್ಣ ಶಿಕ್ಷಕರಾದ ಮಂಜುನಾಥ್ ರಮೇಶ್ ಸಂಜಯ್ ಮುಖ್ಯ ಶಿಕ್ಷಕರಾದ ಮಲ್ಲಿಕಾರ್ಜುನ ನಾಯಕ ಶಿಕ್ಷಕರಾದ ಪ್ರಶಾಂತ್ ಬಿರದಾರ್ ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜು ಉಪಾಧ್ಯಕ್ಷ ಸುರೇಂದ್ರ ಪ್ರಾಂಶುಪಾಲರಾದ ಶಂಭುಲಿಂಗಯ್ಯ ಮುಖಂಡರುಗಳಾದ ಸದಾಶಿವ ರೆಡ್ಡಿ ನಾಗೇಶ್ ಮತ್ತಿತರರು ಹಾಜರಿದ್ದರು

